# ನಾದನೂಪುರ ವಂಡಾರು
# Nadanoopura Vandaru


ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/





ಸರ್ವ ಧರ್ಮ ಸಹಿಷ್ಣುತೆಯ ಸಂದೇಶದ "ದಾನ ಚಿಂತಾಮಣಿ"

ಪರಿವಿಡಿ


ಬೋರ್ಡ್ ರೂಮ್
ಸಂಪಾದಕೀಯ
ಸರ್ವ ಧರ್ಮ ಸಹಿಷ್ಣುತೆಯ ಸಂದೇಶದ ದಾನ ಚಿಂತಾಮಣಿ – ನಗದು ಗೆದ್ದ ವಿಮರ್ಶೆ
ಹವ್ಯಾಸಿ ರಂಗಭೂಮಿಯ ಸವ್ಯಸಾಚಿ – ತೋನ್ಸೆ ಜಯಂತ ಕುಮಾರ
ಧೀರ ಕಲೆಯೊಳಗೆ ಕೀರವಾಣಿಯರು– ಪ್ರಸಂಗಕರ್ತೆ ನಿರ್ಮಲ ಹೆಗಡೆ
ತುಳು ಲಿಪಿಯಲ್ಲಿ ರಚನೆಯಾದ ಅಪ್ಪೆ ಅಂಜನೆ ಪೌರಾಣಿಕ ಪ್ರಸಂಗ
ಕೆರೋಡಿ ಸುಬ್ಬರಾಯರ ಯಕ್ಷಗಾನ ಪ್ರಸಂಗ ಕೃತಿಗಳು
ಅರುವ ಮೇಳದ ತಿರುಗಾಟದ ಬೆರಗು– ಮೇಳ ದರ್ಪಣ ಸಂಚಿಕೆ –3


## ತಿಂಗಳ ಹೈಲೈಟ್ಸ್

**ಸರ್ವ ಧರ್ಮ ಸಹಿಷ್ಣುತೆಯ ಸಂದೇಶದ ದಾನ ಚಿಂತಾಮಣಿ – ನಗದು ಗೆದ್ದ ವಿಮರ್ಶೆ**
**ಹವ್ಯಾಸಿ ರಂಗಭೂಮಿಯ ಸವ್ಯಸಾಚಿ – ತೋನ್ಸೆ ಜಯಂತ ಕುಮಾರ**
**ಅರುವ ಮೇಳದ ತಿರುಗಾಟದ ಬೆರಗು– ಮೇಳ ದರ್ಪಣ**
**ತುಳು ಲಿಪಿಯಲ್ಲಿ ರಚನೆಯಾದ ಅಪ್ಪೆ ಅಂಜನೆ ಪೌರಾಣಿಕ ಪ್ರಸಂಗ**
**ಅವಕಾಶ ಸಿಕ್ಕಾಗ ಅರಳದ ಬಹುಮುಖ ಪ್ರತಿಭೆ – ಪ್ರಸಂಗಕರ್ತೆ ನಿರ್ಮಲ ಹೆಗಡೆ**
**ಕೆರೋಡಿ ಸುಬ್ಬರಾಯರ ಯಕ್ಷಗಾನ ಪ್ರಸಂಗ ಕೃತಿಗಳು**

### ಬೋರ್ಡ್ ರೂಂ

**ಪ್ರಿಯರೆ,**

ನಮಸ್ಕಾರ. ಈ ಬಾರಿ ಅನೇಕ ವಿಷಯಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಉತ್ಸಾಹದಲ್ಲಿದ್ದೇನೆ. ಕಳೆದ ಒಂದೇ ತಿಂಗಳಲ್ಲಿ ಎರಡು ಅರ್ಥಪೂರ್ಣ ಕಾರ್ಯಕ್ರಮಗಳನ್ನು ಮಾಡಿದ ಸಾರ್ಥಕತೆ ನಾದನೂಪುರ ಯ. ಟ್ರಸ್ಟ್ ನದ್ದು. ಮತ್ತೆ ಹೇಳುವುದಾದರೆ ಗೆದ್ದಿದ್ದು ಸಾಂಘಿಕ ಶಕ್ತಿ. ನಾದನೂಪುರ ಯ. ಟ್ರಸ್ಟ್ ಪ್ರಕಟಣೆಯ ಶುಭಾಶಯ ಜೈನ್ ವಿರಚಿತ ಅಪ್ಪೆ ಅಂಜನೆ ಎಂಬ ತುಳು ಪೌರಾಣಿಕ ಪ್ರಸಂಗವನ್ನು ತೆಂಕು ತಿಟ್ಟಿನ ಬೆಂಕಿನಾಥೇಶ್ವರ ಮೇಳ ಜೂನ್ ಮೊದಲ ವಾರದಲ್ಲೇ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾಲೇಜಿನ ಸಹಯೋಗದೊಂದಿಗೆ ಯಶಸ್ವಿಯಾಗಿ ನಡೆಸಿಕೊಟ್ಟಿದೆ. ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಈ ಕಾರ್ಯಕ್ರಮಕ್ಕೆ ಅತ್ಯದ್ಭುತ ಪ್ರತಿಕ್ರಿಯೆ ದೊರಕಿದೆ. ಮೇಳದ ವ್ಯವಸ್ಥಾಪಕರಾದ ಶ್ರೀ ಸುರೇಂದ್ರ ಮಲ್ಲಿಯವರ ನೇತೃತ್ವದಲ್ಲಿ ಕಥೆಯ ಆಶಯಕ್ಕೆ, ಪುರಾಣದ ನಡೆಗೆ ಲೋಪವಾಗದಂತೆ ಕಲಾವಿದರು ಒಮ್ಮನಸ್ಸಿನಿಂದ ಪ್ರದರ್ಶನ ನೀಡಿದ್ದು, ಒಂದು ಪ್ರದರ್ಶನದ ಯಶಸ್ಸಿಗೆ ಪ್ರತಿಯೊಬ್ಬ ಕಲಾವಿದನ ತಾದ್ಯಾತ್ಮತೆ ಅತೀ ಮುಖ್ಯ ಎನ್ನುವುದನ್ನು ಸಾಬೀತು ಪಡಿಸಿದೆ. ಮಂಗಳೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಯಕ್ಷಗಾನ ಪ್ರಸಂಗ ಬಿಡುಗಡೆಯ ಹೊಣೆ ಹೊತ್ತುಕೊಂಡದ್ದು ಟ್ರಸ್ಟ್ ನ ಒಂದು ಮೈಲಿಗಲ್ಲು. ಈ ಮೂಲಕ ಯಕ್ಷಗಾನ ಕೃತಿ ಪ್ರಕಟಣೆಯ ಮೊದಲ ಹೆಜ್ಜೆಯನ್ನು ಹಾಕಿದ್ದೇವೆ. ಈಗಾಗಲೇ ಈ ಕೃತಿಯ ಪ್ರತಿ ಬೇಕು, ಕಳುಹಿಸಿಕೊಡಿ ಎಂದು ಹಲವಾರು ಜನ ಕರೆ ಮಾಡಿ, ಸಂದೇಶದ ಮೂಲಕ ಕೇಳಿರುವುದು ಸಂತಸದ ವಿಷಯ.

ಮತ್ತೊಂದು ಸುವ್ಯವಸ್ಥಿತ ದಾಖಲಾರ್ಹ ಕಾರ್ಯಕ್ರಮ ಬ್ರಹ್ಮಾವರದಲ್ಲಿ ಜೂನ್ ಎರಡನೇ ವಾರದಂತ್ಯದಲ್ಲಿ ನಡೆಯಿತು. ದಾನಚಿಂತಾಮಣಿ ಎಂಬ ಆಖ್ಯಾನದ ಪ್ರದರ್ಶನ. ಯಕ್ಷಗಾನ ಒಂದು ಸಮೂಹ ಕಲೆ. ಎಲ್ಲರ ತೊಡಗಿಸಿಕೊಳ್ಳುವಿಕೆ ಇದ್ದಾಗಲಷ್ಟೆ ಉತ್ತಮ ಪ್ರದರ್ಶನ ಮೂಡಿ ಬರಲು ಸಾಧ್ಯ. ಈ ವಿಚಾರದಲ್ಲಿ ನಿರ್ದೇಶನದಿಂದ ಹಿಡಿದು ಹಿಮ್ಮೇಳ ಮುಮ್ಮೇಳ ಕಲಾವಿದರ ಹೊಂದಾಣಿಕೆ ಒಂದು ಚಮತ್ಕಾರವನ್ನೇ ಮಾಡಿತು. ಮನಸಿನ ತೊಳಲಾಟದ ಅಂತರಂಗ ಸಂವಾದದ ಸಚಿತ್ರ ಪ್ರದರ್ಶನ, ಸತಿಸಹಗಮನ, ಚುಲಕದಿಂದ ಚಾಲುಕ್ಯ ವಂಶಜರ ಸೃಷ್ಠಿ ಹೀಗೆ ವಿನೂತನ ರಂಗ ಪ್ರಯೋಗದ ಪ್ರಯತ್ನಗಳ ನಡೆದವು. ಎಲ್ಲಕ್ಕಿಂತ ಹೆಚ್ಚಾಗಿ ಕಲಾವಿದರ ಸಹಕಾರ, ಪಾತ್ರಕ್ಕೆ ನಡೆಸಿದ ಪೂರ್ಣ ಮನಸಿನ ಸಿದ್ಧತೆ, ಬದ್ಧತೆ, ಪ್ರದರ್ಶನ ಎಲ್ಲೂ ಎಡವದಂತೆ ಚೊಕ್ಕವಾಗಿ ನಡೆಯಲು ಕಾರಣವಾಯಿತು. ಒಂದೊಳ್ಳೆಯ ಕಾರ್ಯಕ್ರಮಕ್ಕೆ ನೆರವು ತಾನಾಗಿಯೇ ಒದಗಿ ಬರುತ್ತದೆ ಎಂಬುದಕ್ಕೆ ಈ ಕಾರ್ಯಕ್ರಮ ಸಾಕ್ಷಿಯಾಯಿತು. ಪ್ರೇಕ್ಷಕರ ನಿರೀಕ್ಷೆಯಲ್ಲಿದ್ದ ನಮಗೆ ನಿರುತ್ಸಾಹವಾಗಲಿಲ್ಲ. ಸದಭಿರುಚಿಯ ಸಹೃದಯ ಪ್ರೇಕ್ಷಕರು ಪ್ರದರ್ಶನದ ಸವಿಯುಣಲು ತುಂಬು ಮನಸಿನಿಂದ ಆಗಮಿಸಿದ್ದರು. ಇನ್ನು ಯಕ್ಷಗಾನದಲ್ಲಿ ಎರಡೆರಡು ಪಾತ್ರ ನಿಭಾಯಿಸಿದ ಕಲಾವಿದರು ಸಂಭಾವನೆಯ ವಿಚಾರದಲ್ಲಿ ಯಾವುದೇ ಆಕ್ಷೇಪ ಬೇಡಿಕೆಗಳನ್ನು ಮಾಡದೇ ಇದ್ದದ್ದೂ ಸಂಭಾವನೆಯ ಭಾರವನ್ನು ಕೊಂಚ ಮಟ್ಟಿಗೆ ತಗ್ಗಿಸಿತು. ಸಭಾಂಗಣದ ಮಾಲಕರು ಸಭಾಭವನದ ಮೊತ್ತವನ್ನು ಕಡಿಮೆಗೊಳಿಸಿದರು. ಊರಿನವರೇ ಆದ ಮೇಷ್ಟರು ಹಾಗೂ ಕಲಾವಿದರಾದ ಮನು ಹಂದಾಡಿಯವರು ಕಲಾವಿದರಿಗೆ ಊಟದ ವ್ಯವಸ್ಥೆಯನ್ನು ಮಾಡಿದ್ದು, ಹೀಗೆ ಒದಗಿದ ಸಣ್ಣ ಪುಟ್ಟ ಸಹಕಾರಗಳು ನಮ್ಮ ಭಾರವನ್ನು ಕಡಿಮೆ ಮಾಡಿದವು ಎಂದರೆ



ತಪ್ಪಿಲ್ಲ. ಇವರೆಲ್ಲರನ್ನೂ ನಾವು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ಈ ಬಾರಿಯ ಟ್ರಸ್ಟ್ ನ ಕಾರ್ಯಕ್ರಮದಲ್ಲಿ ಪ್ರಸಂಗದ ವಿಮರ್ಶೆ ಬರೆಯುವ ಆಹ್ವಾನವನ್ನು ಪ್ರೇಕ್ಷಕರಿಗೆ ನೀಡಿದ್ದೆವು. ಟ್ರಸ್ಟ್ ನಿಂದ ಮಾಡಿದ ಕಾರ್ಯಗಳಲ್ಲಿ ಇದೂ ಒಂದು ವಿನೂತನ ಪ್ರಯತ್ನ ಎಂದೇ ಹೇಳಬಹುದು. ಪರೀಕ್ಷೆ ಇದೆ ಎಂದಾದಾಗ ವಿದ್ಯಾರ್ಥಿಗಳು ಹೇಗೆ ಶ್ರದ್ಧೆಯಿಂದ ತಯಾರಾಗುತ್ತಾರೋ ಹಾಗೆಯೇ, ಸಾರ್ವಜನಿಕರ ವಿಮರ್ಶೆ ಇದೆ ಎಂದಾದಾಗ ಒಟ್ಟು ತಂಡ ಪ್ರದರ್ಶನದ ಪೂರ್ತಿ ಕಣ್ಣಾಗಿರಬೇಕಾಗುತ್ತದೆ. ಯಾವುದೇ ಲೋಪವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ. ಅಲ್ಲದೆ ಬದಲಾವಣೆಗಳಿದ್ದರೆ ಮುಂದೆ ಸರಿಪಡಿಸಿಕೊಳ್ಳಲೂ ಇದೊಂದು ಅವಕಾಶ, ಹೀಗಾಗಿ ವಿಮರ್ಶೆಗಳು ಬರಲಿ ಎಂಬ ತೆರೆದ ಮನಸ್ಥಿತಿಗೆ ಎಲ್ಲರೂ ಒಡ್ಡಿಕೊಂಡಿದ್ದೆವು. ಆದರೆ ಪ್ರಾಮಾಣಿಕ ಪ್ರಯತ್ನಕ್ಕೆ ಪ್ರೋತ್ಸಾಹ ಇದ್ದೇ ಇರುತ್ತದೆ ಎಂಬುದಕ್ಕೆ ಸೂಚ್ಯವಾಗಿ ಬಂದ ಪ್ರತಿಕ್ರಿಯೆಗಳೆಲ್ಲಾ ನಮ್ಮ ಪ್ರಯತ್ನವನ್ನು ಪ್ರೋತ್ಸಾಹಿಸುವಂತಿದ್ದವು. ಕೆಲವೊಂದು ರಂಗ ಲೋಪಗಳ ಬಗ್ಗೆ ಗಮನಕ್ಕೆ ತಂದಿದ್ದಾರೆ ಕೂಡಾ. ಆದರೆ ಯಾವುದೇ ಬರಹಗಳಲ್ಲಿ ಎಲ್ಲೂ ನಮ್ಮ ಉತ್ಸುಕತೆಯನ್ನು ಕುಂದಿಸುವಂತಿರಲಿಲ್ಲ. ದೀರ್ಘ ಬರಹಗಳಲ್ಲಿ ಒಟ್ಟು 16 ವಿಮರ್ಶೆಗಳು ಬಂದಿವೆ. ಇದರಲ್ಲಿ ಇಬ್ಬರು ಮಹಿಳೆಯರು ವಿಮರ್ಶೆ ಕಳುಹಿಸಿದ್ದಾರೆ. ಜೊತೆಗೆ 7 ಕಿರು ಸಂದೇಶ ರೂಪದ ಪ್ರೋತ್ಸಾಹದ ನುಡಿಗಳು ಬಂದಿವೆ. ಒಟ್ಟಿನಲ್ಲಿ ನಿಮ್ಮೆಲ್ಲರ ಹಾರೈಕೆ ಪ್ರೋತ್ಸಾಹಕ್ಕೆ ನಾವು ಆಭಾರಿಗಳು. ಈ ಹಿಂದೆಯೇ ಹೇಳಿದಂತೆ ಆಯ್ದ ಒಂದು ವಿಮರ್ಶೆಗೆ 5000 ರೂಗಳ ನಗದು ಬಹುಮಾನ ನೀಡವ ಹಿನ್ನಲೆಯಲ್ಲಿ ಆಡಳಿತ ಮಂಡಳಿಯ ಸದಸ್ಯರು ಸೇರಿ ಸಮಗ್ರವಾದ ವಿಶ್ಲೇಷಣೆ ಇರುವ ಒಂದು ಬರಹವನ್ನು ಬಹುಮಾನಕ್ಕೆ ಆಯ್ಕೆ ಮಾಡಿದ್ದೇವೆ. ಈ ವಿಮರ್ಶೆಯಲ್ಲಿ ಎಲ್ಲಾ ವಿಭಾಗಗಳ ಬಗ್ಗೆ ನೇರ ಮತ್ತು ಸ್ಪಷ್ಟವಾದ ಅವಲೋಕನವಿತ್ತು. ಬಹುಮಾನಕ್ಕೆ ಆಯ್ಕೆಯಾದ ವಿಮರ್ಶೆ ಉದಯ್ ಪಡುಕೆರೆ ಎಂಬವರದ್ದು. ಆ ಲೇಖನವನ್ನೂ ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಟ್ರಸ್ಟ್ ನ ಜುಲೈ ತಿಂಗಳ ಕಾರ್ಯಕ್ರಮದಲ್ಲಿ ವಿಜೇತರನ್ನು ಕರೆದು ಅಭಿನಂದಿಸಿ ಬಹುಮಾನದ ಮೊತ್ತವನ್ನು ನೀಡಲಿದ್ದೇವೆ. ಇನ್ನು ಇದೇ ಪ್ರಸಂಗದ ಪ್ರದರ್ಶನವನ್ನು ಯಾರಾದರೂ ಬಯಸಿದರೆ, ಟ್ರಸ್ಟ್ ವತಿಯಿಂದ ಪ್ರದರ್ಶನ ನಡೆಸಿಕೊಡಲು ಸಿದ್ಧರಿದ್ದೇವೆ. ಆಸಕ್ತರು ದೂರವಾಣಿ ಮೂಲಕ ನನ್ನನ್ನು ಸಂಪರ್ಕಿಸಬಹುದು. ಇಷ್ಟೇ ಅಲ್ಲ, ಮುಂದೆ ನಡೆಸಲಿರುವ ಕಾರ್ಯಗಳ ಬಗ್ಗೆ ಇನ್ನಷ್ಟು ಯೋಜನೆಗಳು ನಮ್ಮ ಕಣ್ಣ ಮುಂದಿವೆ. ಮುಂದಿನ ಸಂಚಿಕೆಯಲ್ಲಿ ಅದರ ಕುರಿತು ಮಾತಾಡೋಣ. ಮತ್ತೆ ಸಿಗುವೆ. ಪ್ರೀತಿ ಇರಲಿ. ನಿಮ್ಮವನೆ, ***ಗೋವಿಂದ ವಂಡಾರು***

---

**ಸಂಪಾದಕೀಯ**

***ಆತ್ಮೀಯ ಓದುಗರೆ,***

ಒಂದು ಕಥೆ ಕಲ್ಪಿಸಿ, ಪದ್ಯ ಬರೆದು ಜೋಡಿಸಿ, ದೃಶ್ಯಾವಳಿಗಳಿಗಳನ್ನು ಹೆಣೆದು, ಪ್ರಸಂಗ ರೂಪಕ್ಕೆ ತಂದು ರಂಗದ ಮೇಲೆ ಪ್ರದರ್ಶನ ಕಾಣ್ಸೋದ್ರ ಹಿಂದೆ ಸುದೀರ್ಘ ಶ್ರಮ, ಸಮಯ, ಅಧ್ಯಯನದ ಹೂಡಿಕೆಯಿದೆ. ಒಂದು ಕಲಾತಂಡದೊಳಗಿದ್ದು, ಕಲಾವಿದರ ಒಡನಾಡಿಗಳಾಗಿದ್ದು, ಹೊಸ ಪ್ರಸಂಗವನ್ನು ಮಾಡಿಸುವುದಕ್ಕೂ, ಸಂಪೂರ್ಣ ಪರಕೀಯಳಾಗಿ ಒಡನಾಟವಿಲ್ಲದ ಕಲಾವಿದರನ್ನು ನಮ್ಮ ಕಲ್ಪನೆಯ ಚೌಕಟ್ಟಿನೊಳಗೆ ತರೋದಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಹೊಸ ಪ್ರಸಂಗ ಮೊದಲು ರಂಗ ಪ್ರಯೋಗವಾಗೋವಾಗ ಪ್ರಸಂಗದ ಕಥೆ ನಡೆಗಳ ತಿದ್ದುಪಡಿ ಬದಲಾವಣೆ ಇವೆಲ್ಲರೂ ಆ ಕಲಾತಂಡದೊಳಗಿದ್ದಾಗ ಮಾತ್ರ ನಿರ್ದೇಶನದ ಪರಿಧಿಯೊಳಗೆ ಒಂದು ತಂಡವನ್ನು ತರಲು ಸಾಧ್ಯವಿದೆ. ಇಲ್ಲವಾದರೆ, ಅದೇ ಕ್ಷೇತ್ರದಲ್ಲಿರುವವವರ ಸಹಕಾರ ತೆಗೆದುಕೊಂಡಾಗ ಒಂದು ಪ್ರದರ್ಶನವನ್ನು ಸಮರ್ಥವಾಗಿ ರಂಗೀಕರಣಗೊಳಿಸಬಹುದು. ಹೊರಗಿನ ವ್ಯಕ್ತಿಯ ಯೋಚನೆ ವಿಚಾರಗಳನ್ನು ಒಂದು ತಂಡ ರಂಗದಲ್ಲಿ ಅನುಷ್ಠಾನಗೊಳಿಸುವುದು ಕಷ್ಟವೇ. ಇದು ನನಗೆದುರಾದ ಸವಾಲು. ಈ ಸಂದರ್ಭದಲ್ಲಿ ನನಗೆ ಹಿತಕರವಾದ ವಾತಾವರಣವನ್ನು ಸೃಷ್ಟಿಸಿದವರು, ತೆಂಕಿನಲ್ಲಿ ಸುರೇಂದ್ರ ಮಲ್ಲಿಯವರು, ಬಡಗಿನಲ್ಲಿ ಎಂಕೆ ರಮೇಶ್ ಆಚಾರ್, ವಂಡಾರು ಗೋವಿಂದರು ಮತ್ತು ಮೂಡುಬೆಳ್ಳೆ ಚಂದ್ರಕಾಂತ್ ರಾವ್ ರವರು. ನನ್ನ ಪ್ರಸಂಗ ಸಾಂಪ್ರದಾಯಿಕವಾಗಿ ಯಕ್ಷಗಾನೀಯವಾಗಿಯೇ ಬೇಕು ಎಂಬ ಕಾರಣಕ್ಕೆ ಯಾವುದೇ ಮೇಳದಿಂದ ಆಡಿಸುವ ಇರಾದೆಯನ್ನು ಹೊಂದಿರದೆ ನಮಗೆ ಬೇಕಾದಂತೆಯೇ ಟ್ರಸ್ಟ್ ಮುಖಾಂತರ ಪ್ರಸಂಗ ಪ್ರದರ್ಶನವನ್ನು ಆಯೋಜಿಸಿದ್ದೆವು. ನಾವು ಹೇಳೋ ಕಥೆ ಯಾವ ಸಂದೇಶ ನೀಡಬೇಕು ಅನ್ನೋದರ ಬಗ್ಗೆ ಗಂಭೀರವಾದ ಯೋಚನೆಗಳಿರಲಿಲ್ಲ. ಆದರೆ ನಿರೀಕ್ಷಿಸಿದ ಕಲಾವಿದರಿಂದ ಯಾವ ರೀತಿಯ ಪ್ರತಿಭೆಯನ್ನು ಹೊರ ಹಾಕಿಸಬೇಕಿತ್ತೋ ಆ ಉದ್ದೇಶ ಯಶಸ್ವಿಯಾಗಿದೆ. ರಂಜನೆ, ರಸೋತ್ಪತ್ತಿ, ಸಮರ್ಥ ಸನ್ನಿವೇಶ ನಿರ್ಮಾಣ, ನಾಟ್ಯ, ಗಾನ, ಸಾಹಿತ್ಯ, ಹಿಮ್ಮೇಳಕ್ಕೆ ವಿಪುಲ ಅವಕಾಶ ಕಲ್ಪಿಸುವ ನೆಲೆಯಲ್ಲಿ ಒಂದು ಯಶಸ್ವಿ ಪ್ರಯೋಗ ಇದೆನ್ನಬಹುದು. ಕಲಾವಿದರು ಕಥೆಯ ಕುರಿತು ಆಸಕ್ತಿ ತೋರದೆ, ಸ್ಪಂದಿಸದೆ ಈ ಹಿಂದೆ ಮೇಳದಲ್ಲಿಯೇ ಒಂದೆರಡು ಪ್ರಸಂಗಗಳು ಕಳಪೆಯಾದ ಕಹಿ ಉಂಡವಳು ನಾನು. ಆದರೆ ನಾದನೂಪುರ ಟ್ರಸ್ಟ್ ಸಂಯೋಜಿಸಿದ ಕಲಾವಿದರ ತಂಡ ನನ್ನ ನಿರೀಕ್ಷೆಯನ್ನು ಹುಸಿ ಮಾಡಿಲ್ಲ. ಇದಕ್ಕೆ ಬಹುತೂಕದ ಶ್ರಮ ಹಾಕಿದವರಲ್ಲಿ ಈ ಮೇಲೆ ಉಲ್ಲೇಖಿಸಿದ ಮೂವರು ಕಾರಣ ಎಂದರೆ ತಪ್ಪಲ್ಲ. ಪ್ರೇಕ್ಷಕರ ಪ್ರೋತ್ಸಾಹದ ನುಡಿ, ನಮ್ಮ ಕಲ್ಪನೆಗೆ ಪೂರಕವಾಗಿ ಕಲಾವಿದರು ಒದಗುತ್ತಾರೆ ಎಂಬ ಭರವಸೆಯೇ ಇನ್ನಷ್ಟು ಪ್ರಸಂಗಗಳನ್ನು ಬರೆಯುವ ಉಮೇದನ್ನು ಹೆಚ್ಚಿಸಿದೆ. ನಮಗೆ ತಲುಪಿರುವ ವಿಮರ್ಶೆಗಳನ್ನು ಓದಿ ಬಹಳ ಹರ್ಷವಾಗಿದೆ.

ಯಕ್ಷಗಾನವೆಂಬ ಸತ್ವಭರಿತ ಕಲೆ ಅನವಶ್ಯಕ ಸೇರ್ಪಡೆಗಳಿಂದ ಮೌಲ್ಯ ಹಿಂದಿನ ಸೊಗಡನ್ನು ಕಳೆದುಕೊಳ್ಳುತ್ತಿದೆ ಎಂಬ ಕೂಗು ಕಳೆದ ಒಂದೆರಡು ದಶಕದ್ದು. ಇದಕ್ಕೆ ಕಾರಣ ಬದಲಾದ ಪ್ರೇಕ್ಷಕರ ಅಭಿರುಚಿ ಎಂಬ ಆರೋಪ ಸಿದ್ಧ ಉತ್ತರವಾಗಿ ಕಾಣಿಸುತ್ತದೆ. ವಾಸ್ತವವಾಗಿ ಈ ಆರೋಪ ಆಧಾರವಿಲ್ಲದ, ಸಮೀಕ್ಷೆಗಳಿಲ್ಲದ ಊಹೆಯಷ್ಟೆ ಎಂಬುದು ನಮಗೆ ಬಂದಿರುವ ವಿಮರ್ಶೆಗಳಿಂದ ವಿದಿಶವಾಗುತ್ತದೆ. ಎಷ್ಟೋ ಸಲ ಪ್ರೇಕ್ಷಕರ ಅಭಿರುಚಿ ಬದಲಾಗಿರುವುದು ಗೋಚರವಾಗುವ ಅಂಶವಾದರೂ ಅದೇ ಬಹು ಪ್ರಮಾಣ ಎಂದು ಹೇಳಲಾಗದು. ಆಟ ನೋಡ ಬರೋ ಪ್ರೇಕ್ಷಕರು ಮನರಂಜನೆಗಷ್ಟೇ ಬರ್ತಾರೆ. ಅಮೂಲಾಗ್ರ ಪ್ರದರ್ಶನದ ತಿರುಳು ತಿಳಿಯೋ ಆಸಕ್ತರು ಕಡಿಮೆ ಅನ್ನೋದು ಶುದ್ಧ ಸುಳ್ಳು. ಮೊನ್ನೆಯ ಪ್ರದರ್ಶನದಲ್ಲಿ ಕಥೆಯ ಪ್ರತಿ ಘಟ್ಟಗಳನ್ನು ಚೆನ್ನಾಗಿ ಅರ್ಥೈಸಿಕೊಂಡು ಬೇಕಾದ ಸುಧಾರಣೆಗಳನ್ನೂ ತಿಳಿಸಿ ಇಡೀ ತಂಡಕ್ಕೆ ಮುಂದಿನ ಪ್ರದರ್ಶನಕ್ಕೆ ಹೊಸ ಚೈತನ್ಯ ನೀಡಿದ್ದಾರೆ ಪ್ರೀತಿಯ ಪ್ರೇಕ್ಷಕರು. ಅವರೆಲ್ಲರಿಗೂ ತುಂಬು ಹೃದಯದ ಕೃತಜ್ಞತೆಗಳು.

ಮುಖ್ಯವಾಗಿ ಪ್ರಸಂಗದ ಕುರಿತು ಉತ್ತರಿಸಲೇಬೇಕಾದ ಪ್ರೇಕ್ಷಕರ ಕೆಲವೊಂದು ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನ ಮಾಡುತ್ತೇನೆ.

ಭೂಮಿಯಲ್ಲಿ ಉತ್ಸರ್ಪಿಣಿ ಕಾಲ ಮುಗಿದು ಅವಸರ್ಪಿಣಿ ಕಾಲ ಉಂಟಾದಾಗ ಇಂದ್ರ ಜಗತ್ತಿನಲ್ಲೆಲ್ಲಾ ಹೆಚ್ಚುತ್ತಿದ್ದ ಅಧರ್ಮವನ್ನು ಹತ್ತಿಕ್ಕಿ ,ದುರುಳರನ್ನು ಸದೆಬಡಿಯಲು ಸಮರ್ಥನಾದ ವೀರನೊಬ್ಬನ್ನು ಸೃಷ್ಟಿಸುವಂತೆ ಬ್ರಹ್ಮನನ್ನು ಬೇಡಿಕೊಂಡ. ಇದಕ್ಕೊಪ್ಪಿದ ಬ್ರಹ್ಮ ಸಂಧ್ಯಾವಂದನೆ ಮಾಡುವಾಗ ಅವನ ಬೊಗಸೆಯಿಂದ (ಚುಲುಕ) ವೀರನೊಬ್ಬ ಹೊರಬಂದ. ಅವನೇ ಚಾಲುಕ್ಯವಂಶದ ಮೂಲಪುರುಷ. ಚಾಲುಕ್ಯರ ಆಡಳಿತದಲ್ಲಿ, ನ್ಯಾಯ, ನೀತಿ ಧರ್ಮ ಹೇಗೆ ಮೆರೆಯಿತು ಎಂಬುದರ ಸೋದಾಹರಣ ಕಥಾನಕವೇ ದಾನಚಿಂತಾಮಣಿ.

***1. ಅಕ್ಕ ತಂಗಿಯರಿಬ್ಬರ ಬೇರೆ ಬೇರೆ ಧರ್ಮಾನುಸರಣೆಗೆ ಕಾರಣವೇನು??***

ಭೃಂಗ ಮಂಡಲ(ಕಾಲ್ಪನಿಕ ಹೆಸರು)ದ ಚಿತ್ತೂರಿನ ಪಂಡಿತರಾದ ಮಲ್ಲಣದೇವ ಮತ್ತು ಜಕ್ಕಣದೇವ ಸಹೋದರರು ಬಾಲ್ಯದಿಂದಲೇ ಬೇರೆ ಬೇರೆ ಸಂಸ್ಕಾರದಲ್ಲಿ ಬೆಳೆದವರು.. ಜಕ್ಕಣನಿಗೆ ವೈದಿಕ ಗುರುಕುಲದ ಸಂಸ್ಕಾರ ಸಿಕ್ಕಿದರೆ, ಮಲ್ಲಣದೇವ ಜೈನ ದಿಗಂಬರ ಮಠದಲ್ಲಿ ಬೆಳೆದವನು.. ಮಲ್ಲಣದೇವನ ಅವಳಿ ಹೆಣ್ಣುಮಕ್ಕಳಲ್ಲಿ, ಒಬ್ಬಳನ್ನು ಜಕ್ಕಣ ಸಾಕುತ್ತಾನೆ. ಹೀಗೆ ಒಬ್ಬರನ್ನೊಬ್ಬರು ಬಹಳ ಪ್ರೀತಿಸುತ್ತಿದ್ದ ಅಕ್ಕ ತಂಗಿಯರಾದ ಶುಭವಂತಿ ದೇವಿ ಮತ್ತು ವಿನಂತಿದೇವಿಯರು ಬಾಲ್ಯದಲ್ಲೇ ದೂರಾಗುತ್ತಾರೆ. ಅವರನ್ನು ಬೆಳೆಸಿದ ಪೋಷಕರ ಧರ್ಮ ಸಂಸ್ಕಾರ ನಂಬಿಕೆಯ ಪ್ರಕಾರ ಅವರ ಧರ್ಮಾನುಸರಣೆಯೂ ವ್ಯತಿರಿಕ್ತವಾಗಿರುತ್ತದೆ. ಜಕ್ಕಣದೇವ ಯಾತ್ರೆಗೆ ತೆರಳುವ ಕಾರಣದಿಂದ ವಿನಂತಿಯನ್ನು ತವರು ಮನೆಗೆ ಕಳುಹಿಸುತ್ತಾನೆ. ಬಾಲ್ಯದಲ್ಲಿ ದೂರವಾಗಿದ್ದ ಅವಳಿ ಸಹೋದರಿಯರು ಮತ್ತೆ ಯವ್ವನಾವಸ್ಥೆಯಲ್ಲಿ ಒಂದಾಗುತ್ತಾರೆ. ಸ್ವಧರ್ಮ ಪರಿಪಾಲನೆ, ಪರಧರ್ಮ ಸಹಿಷ್ಣುತೆ ಮತ್ತು ಗೌರವ ಈ ಅವಳಿ ಸಹೋದರಿಯರ ಮೂಲಧರ್ಮವಾಗಿರುತ್ತದೆ.

***2. ಅಕ್ಕ ತಂಗಿಯರಿಬ್ಬರೂ ಒಬ್ಬನನ್ನೇ ಮದುವೆಯಾದ ಕಾರಣ?***

ಶುಭವಂತಿದೇವಿ ಹಾಗೂ ವಿನಂತಿದೇವಿಯರು ಅವಳಿ ಸಹೋದರಿಯರು. ಅವರ ನಡುವೆ ಯಾವುದೇ ಭಿನ್ನಾಭಿಪ್ರಾಯವಿರಲಿಲ್ಲ. ಹಿಂದಿನ ಕಾಲದಲ್ಲಿ ಸಮಾಜದಲ್ಲಿ ಒಂದು ಹೆಣ್ಣನ್ನು ವಸ್ತುವಿನ ರೀತಿ ಪರಿಗಣಿಸುತ್ತಿದ್ದರು. ಹೆತ್ತವರು ಹೇಳಿದ, ತೋರಿಸಿದ ಹುಡುಗನೊಂದಿಗೆ ಅವರು ವಿವಾಹವಾಗಬೇಕಿತ್ತು. ಹೆಣ್ಣು ಮಕ್ಕಳ ಆಯ್ಕೆಗೆ ಅಭಿಪ್ರಾಯಗಳಿಗೆ ಯಾವುದೇ ಮನ್ನಣೆಗಳಿರಲಿಲ್ಲ. ಆದರೆ ಈ ಕಥೆಯಲ್ಲಿ ಪ್ರಸೇನದೇವನ ಪ್ರಿತಿಯನ್ನು ಒಪ್ಪಿಕೊಳ್ಳುವುದಕ್ಕೆ ಹಾಗೂ ತಿರಸ್ಕರಿಸುವುದಕ್ಕೆ ಇಬ್ಬರಿಗೂ ಸಾಕಷ್ಟು ಅವಕಾಶಗಳಿತ್ತು. ಸಂಗಾತಿಯ ಆಯ್ಕೆಯಲ್ಲಿ ಸ್ವಾತಂತ್ರ್ಯದ ಉದ್ದೇಶವನ್ನು ಈ ಕಥೆ ಈಡೇರಿಸಿಕೊಂಡಿದೆ.

***3. ಪ್ರಸೇನದೇವನ ಮರಣದ ಕುರಿತು***

ಕಲಿ ಪ್ರಸೇನದೇವನ ಮರಣ ಸಾಮಾನ್ಯ ಮರಣವಲ್ಲ. ರಣರಂಗದಲ್ಲಿ ನಾಡಿನ ದಂಡನಾಯಕ ಪ್ರಸೇವದೇವ ದೇವಾಂಗನಾ ಜನ ಸಮೋತ್ಸುಕ ಚಿತ್ತನಾಗಿ ದೇವಲೋಕಕ್ಕೆ ತೆರಳುತ್ತಾನೆ.

***4. ವಿನಂತಿದೇವಿಯ ಅನುಗಮನ/ ಸತಿ ಸಹಗಮನದ ಕುರಿತು***

ಉದ್ವೇಗ, ಆವೇಗ, ಆವೇಶ, ಆಕ್ರಂದನಗಳಿಗೆ ಕಾರಣವಾದ ಸತಿ ಸಹಗಮನವನ್ನು ಜಿನಧರ್ಮ ಒಪ್ಪುವುದಿಲ್ಲ. ನಿಧಾನವಾಗಿ ಯೋಚಿಸಿ ಗುರುಸನ್ನಿಧಿಯಲ್ಲಿ ಸಲ್ಲೇಖನ ಕೈಗೊಂಡು ಸಮಾಧಿ ಮರಣ ಪಡೆಯುವುದೇ ಜಿನಧರ್ಮದ ನಂಬಿಕೆ. ಅದಕ್ಕಾಗಿ ಜಿನಧರ್ಮ ಪಾಲಕಿಯಾದ ಶುಭವಂತಿ ವಿನಂತಿಯನ್ನು ಅನುಗಮನ ಮಾಡದಂತೆ ತಡೆದರೂ ವಿನಂತಿಯ ನಂಬಿಕೆಗಳೇ ಬೇರೆ. ಇದು ನನ್ನ ಧರ್ಮಪಾಲನೆ ಎಂದು ಅವಳನ್ನು ಮಾತಿನಲ್ಲಿ ಕಟ್ಟಿ ಹಾಕುತ್ತಾಳೆ. ಶುಭವಂತಿ ಸಹೋದರಿಯ ಸತಿಸಹಗಮನದ ದೃಶ್ಯವನ್ನು ನೋಡಲಾಗದೆ ಅವಳ ಧರ್ಮಪಾಲನೆಗೆ ಅನುವು ಮಾಡಿಕೊಟ್ಟು ಅಲ್ಲಿಂದ ತೆರಳುತ್ತಾಳೆ.

ಎರಡನೆಯ ಭಾಗದಲ್ಲಿ ಶೀಲಾಲಂಕಾರೆಯಾದ ಶುಭವಂತಿಯದ್ದೇ ಪ್ರಮುಖ ಪಾತ್ರ. ವೈಧವ್ಯದಲ್ಲಿದ್ದರೂ ತನ್ನ ಮಗ ಅಣ್ಣಿಗದೇವನನ್ನು ಮಹಾಕಲಿಯಾಗಿ ರೂಪಿಸವಲ್ಲಿ ಬಳೆಗಾರನ ಮಗನಾದ ಪನ್ನಗನನ್ನು ತಾನೇ ಸಾಕಿ ಬೆಳೆಸಿ, ಮಹಾಕವಿಯನ್ನಾಗಿ ರೂಪಿಸುವುದರಲ್ಲಿ, ಧರ್ಮ ಪ್ರಚಾರಕ್ಕಾಗಿ ಶುಭವಂತಿ ಕೈಗೊಂಡ ಕಾರ್ಯಗಳು, ನಿರ್ಮಿಸಿದ ದೇವಾಲಯಗಳು, ಅರಸೊತ್ತಿಗೆಯ ರಕ್ಷಣೆಗಾಗಿ ರಣಕ್ಷೇತ್ರದಲ್ಲಿ ಹೋರಾಡಿ ಜಯ ದೊರಕಿಸಿ ಕೊಟ್ಟದ್ದು ಹೀಗೆ ಅವಳ ಸಾಧನೆ ಸಾಹಸಗಳ ಸುತ್ತಲೇ ಕಥೆ ನಡೆಯುತ್ತದೆ. ಅದರ ನಡುವೆ ಪನ್ನಗದೇವನಿಗೆ ಪರಿಯವಾಗ ಕಾಂತಿ ಮತ್ತು ಕುಂತಿಯರೊಡನೆ, ಪ್ರೇಮ, ವಿವಾಹ, ಅವರ ಮಕ್ಕಳಿಗೆ ಸಾಕಿದ ತಾಯಿಯ ಹೆಸರನ್ನಿಡುವುದು, ಕುಂತಿಗೆ ಮರುಜನ್ಮ ಪ್ರಾಪ್ತಿಯಾಗುವ ಘಟನೆಗಳು ನಡೆಯುತ್ತವೆ.

ಶುಭವಂತಿ ದೇವಿ ಸಾಕಿದ ಮಗ ಪನ್ನಗದೇವ ರಚಿಸಿ ಹಾಡಿವ ಸ್ವರಸಂವೇದಿ ಕಾವ್ಯದಿಂದ ಮೂಕಿಯರಾದ ಕಾಂತಿ ಮತ್ತು ಕುಂತಿಯರಿಗೆ ಮಾತು ಬರುತ್ತದೆ. ಕುಂತಿಗೆ ಸಾವಾದರೂ ಮತ್ತೆ ಶುಭವಂತಿ ನೀಡಿದ ಜಿನ ಗಂಧೋದಕದಿಂದ ಜೀವ ಪಡೆಯುತ್ತಾಳೆ.

***5. ಕುಂತಿಗೆ ಮರುಜನ್ಮ ನೀಡುವ ಜಿನಗಂಧೋದಕದ ಕುರಿತು***

ಕುಂತಿಗೆ ಪಾವಾಪುರಿ ಕ್ಷೇತ್ರದಿಂದ ತಂದಿರುವ ಜಿನಗಂಧೋದಕ ಸಂಪ್ರೋಕ್ಷಣೆಯಾದಾಗ ಮತ್ತೆ ಜೀವ ಪಡೆಯುತ್ತಾಳೆ ಎಂಬುದು ವಿಧಿ ಲಿಖಿತ. ಶುಭವಂತಿ ತೀರ್ಥ ಕ್ಷೇತ್ರಗಳ ಸಂದರ್ಶನ ಮಾಡಲು ಪಾವಾಪುರಿಗೂ ತೆರಳಿರುತ್ತಾಳೆ. ಯಾತ್ರೆಯಿಂದ ಮರಳಬೇಕಾದರೆ ಅವಳ ಆರಾಧ್ಯ ಮೂರ್ತಿ ನೀರಿನಲ್ಲಿ ಬಿದ್ದು ಕಳೆದು ಹೋಗುತ್ತದೆ. ಆಗ ಶುಭವಂತಿ ತನ್ನ ಪೂಜೆಯಲ್ಲಿ ಲೋಪವಾಯಿತೆಂದು ಭಾವಿಸಿ ನಿರಶನ ವ್ರತವನ್ನು ಕೈಗೊಂಡಾಗ, ಕುಂತಿಯ ಆತ್ಮ ಅವಳ ಮೂರ್ತಿಯನ್ನು ನದಿಯಾಳದಿಂದ ತಂದು ಕೊಡುತ್ತದೆ. ಇದಕ್ಕೆ ಪ್ರತಿಯಾಗಿ ಪಾವಾಪುರಿಯ ಜಿನಗಂಧೋದಕವನ್ನು ಪಡೆದು ಆ ಉದಕದಿಂದ ಕಾಂತಿ ಜೀವ ಪಡೆಯುತ್ತಾಳೆ.

ಪ್ರಸಂಗದ ಸ್ಪಷ್ಟತೆ ಇಷ್ಟು ಸಾಕೆಂದು ಭಾವಿಸ್ತಾ ಇಲ್ಲಿಗೆ ನಿಲ್ಲಿಸ್ತೇನೆ. ಮುಂದಿನ ಸಂಚಿಕೆಯಲ್ಲಿ ಮತ್ತೆ ಭೇಟಿಯಾಗೋಣ. ನಮಸ್ಕಾರ – ***ಸಂಪಾದಕರು***

*ನಿಮಗಿದು ಗೊತ್ತೇ?* – ಏಳು ವರ್ಷಗಳ ಹಿಂದೆ ಇಹಲೋಕವನ್ನು ತ್ಯಜಿಸಿದ ತೆಂಕು–ಬಡಗಿನ ಸುಪ್ರಸಿದ್ಧ ವೇಷಧಾರಿ ಸಿದ್ದಕಟ್ಟೆ ವಿಶ್ವನಾಥ ಶೆಟ್ಟರು ಬೊಟ್ಟಿಕೆರೆ ಪುರುಷೋತ್ತಮ ಪೂಂಜರ ಮಾನಿಷಾದ ಪ್ರಸಂಗದ ವಾಲ್ಮೀಕಿ ಪಾತ್ರ ನಿರ್ವಹಣೆಯಿಂದ ಯಕ್ಷರಂಗದ ವಾಲ್ಮೀಕಿ ಎನಿಸಿಕೊಂಡಿದ್ದರು.

ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – **nadanoopuravandaru@gmail.com** ಮೊಬೈಲ್ ಸಂಖ್ಯೆ– 9482847978. ನಮ್ಮ ವೆಬ್ ಸೈಟ್ ವಿಳಾಸ– **https://nyt.1ngo.in/** – ಸಂಪಾದಕರು

# ಸರ್ವ ಧರ್ಮ ಸಹಿಷ್ಣುತೆಯ ಸಂದೇಶದ ದಾನ ಚಿಂತಾಮಣಿ–ಬಹುಮಾನ ವಿಜೇತ ವಿಮರ್ಶೆ

**ಜ**ನಾನುರಾಗ ಬದಲಾದಂತೆ ಕಲೆ ತನ್ನ ಮೂಲ ಸ್ವರೂಪವನ್ನು ಉಳಿಸಿಕೊಂಡು ಬದಲಾವಣೆಗಳಿಗೆ ತೆರೆದುಕೊಂಡಾಗ ಅದರ ಪರಿಧಿಯ ವಿಸ್ತಾರ ಸಾಧ್ಯ. ಸಮಕಾಲೀನ ಯಕ್ಷಗಾನ ರಂಗಭೂಮಿ ಇಂತಹ ಬದಲಾವಣೆಯ ಸಾಧ್ಯತೆಗಳನ್ನು ಈಗೀಗ ಹೆಚ್ಚು ನೆಚ್ಚಿಕೊಂಡಂತಿದೆ.ಈ ಕ್ಷೇತ್ರಕ್ಕೆ ಇತ್ತೀಚಿನ ದಿನಮಾನಗಳಲ್ಲಿ ಹರಿದು ಬರುತ್ತಿರುವ ಹೊಸ ಪ್ರಸಂಗ ಪಠ್ಯಗಳು ಈ ಮಾತನ್ನು ಘನೀಭವಿಸುತ್ತವೆ. ಯಕ್ಷಗಾನ ರಂಗಭೂಮಿಗೆ ಆಖ್ಯಾನಗಳ ಹೊಸ ದಿಸೆಯ ಹಾದಿಯಲ್ಲಿನ ಒಂದು ಕೈದೀವಿಗೆ ಶುಭಾಶಯ ಜೈನ್. ಯಕ್ಷಗಾನದ ಉಭಯ ತಿಟ್ಟುಗಳಿಗೂ ಪ್ರಸಂಗ ಒದಗಿಸುತ್ತಿರುವ ಶುಭಾಶಯರ ಮತ್ತೊಂದು ಕೃತಿ ದಾನ ಚಿಂತಾಮಣಿ ಇತ್ತೀಚೆಗೆ ಬ್ರಹ್ಮಾವರ ಬಂಟರ ಭವನದಲ್ಲಿ ಎಂ ಕೆ ರಮೇಶ್ ಆಚಾರ್ ರ ದಿಗ್ದರ್ಶನದಲ್ಲಿ ರಂಗ ಕಂಡಿದ್ದು ಈ ಪ್ರದರ್ಶನದ ಕುರಿತು ಒಂದು ಬೀಸು ನೋಟ.

"ಕೊಟ್ಟು ಮರೆಯುವ ಸುಖದ
ಗುಟ್ಟು ಅರಿಯಲೇಬೇಕೆ?
ಇಟ್ಟುಕೋ ಮುಗಿಲ ನೆನಪು!

ಕೊಡುವುದರಲ್ಲೇ ಸುಖ ಕಾಣುವ, ದಾನ– ಧರ್ಮದ ಸುಕೃತದಲ್ಲೇ ಬದುಕಿನ ಪಾರಮಾರ್ಥಕತೆಯನ್ನು ಅರಸುವ, ದಾನ ಕೈಂಕರ್ಯದಲ್ಲಿ ದಾನ ಚಿಂತಾಮಣಿ ಅತ್ತಿಮಬ್ಬೆಗೆ ಸರಿಮಿಗಿಲೆನಿಸುವ ಶುಭವಂತಿಯ ಸರಳ ಬದುಕು ಹಲವು ಸಂಕೀರ್ಣತೆಯ ಹಳವಂಡಗಳಿಗೆ ಬಿದ್ದಾಗ ಆಕೆ ಆ ಎಲ್ಲಾ ಸಂಕಷ್ಟಗಳನ್ನು ಮೀರಿ ಮತ್ತೆ ಬದುಕನ್ನು ತಹಬಂದಿಗೆ ತಂದುಕೊಳ್ಳುತ್ತಾಳಾದರೆ ಅದಕ್ಕೆ ಕಾರಣ ಆಕೆಯ ಧೀಶಕ್ತಿಯೆ? ಆಕೆ ಏಕೋ ದೃಢಭಕ್ತಿಯಿಂದ ಎಡೆಬಿಡದೆ ಆರಾಧಿಸುವ ಜಿನೇಶ್ವರನ ಕೃಪೆಯೆ?ದಾನಾದಿ ಕರ್ಮಗಳಿಂದ ಆಕೆ ಗಳಿಸಿರಬಹುದಾದ ಪುಣ್ಯಫಲವೆ? ಕಥೆಯ ಓಘ ಪ್ರೇಕ್ಷಕನನ್ನು ಸಂದರ್ಭಾನುಸಾರ ಈ ತೆರನಾದ ಚಿಂತನೆಯ ಒರೆಗೆ ನೂಕಿ ನವಿರಾಗಿ ಹೊರಗೆಳೆಯುತ್ತದೆ.

ಶುಭವಂತಿಯ ಬಾಳ ಪಯಣದ ಹಾದಿಗುಂಟ ಹಾಯುವ ವಿನಂತಿ, ಪ್ರಸೇನದೇವ,ಕಾಂತಿ,ಕುಂತಿ, ಪನ್ನಗ ಮೊದಲಾದ ಪಾತ್ರಗಳನ್ನು ಪ್ರಸಂಗಕರ್ತೆ ಪೋಷಿಸಿದ ಪರಿ ಆಕೆ ಅತ್ಯಂತ ಧ್ವನಿಪೂರ್ಣವಾಗಿ ಪ್ರಸಂಗದ ಮೂಲಕ ಯಾವ ಸಂದೇಶವನ್ನು ಪ್ರೇಕ್ಷಕ ಸಮೂಹಕ್ಕೆ ರವಾನಿಸಬೇಕೆನ್ನುವುದರ ಬಗೆಗೆ ಹೆಚ್ಚು ಸ್ಪಷ್ಟವಿರುವುದನ್ನು ವಿಷದಪಡಿಸುತ್ತದೆ.






ಚಾಲ್ತಿಯಲ್ಲಿರುವ ತರುಣ ಕಲಾವಿದ ವಿಶ್ವನಾಥ ಹೆನ್ನಾಬೈಲು ಇಂದ್ರನಾಗಿ ರಂಗ ಪ್ರವೇಶಿಸುವುದರೊಂದಿಗೆ ದಾನ ಚಿಂತಾಮಣಿಯ ಕಥೆ ಮೊದಲ್ಗೊಳ್ಳುತ್ತದೆ. ಅರೆ! ಹೆನ್ನಾಬೈಲು ಇಂದ್ರನೆ? ಪ್ರೇಕ್ಷಕ ಚಕಿತಗೊಳ್ಳುತ್ತಿರುವಾಗಲೆ ಭೂಲೋಕದಿಂದ ಹವಿಸ್ಸು ಸಮರ್ಪಣೆಯ ಪರಿಯ ಕುರಿತಂತೆ ಅಸಮಾಧಾನಗೊಂಡ ಇಂದ್ರ ಅದನ್ನು ಸುಲಲಿತಗೊಳಿಸುವ ಬಗೆ ಅರಿಯದೆ ಬ್ರಹ್ಮನೆಡೆಗೆ ಧಾವಿಸುತ್ತಾನೆ. ಬ್ರಹ್ಮ, 'ಜ್ಞಾನ ಬ್ರಹ್ಮ'ನೂ ಅಹುದು ಅನಿಸುವ ಪಾಂಡಿತ್ಯ ಪೂರ್ಣ ಅರ್ಥಗಾರಿಕೆ ಎಂ ಕೆ ರಮೇಶ ಆಚಾರ್ರದ್ದು. ಬ್ರಹ್ಮನ ಭರವಸೆಯ ನುಡಿಗಳಿಂದ ಅತ್ತ ಇಂದ್ರ ಸಂತ್ರಪ್ತನಾಗುತ್ತಲೇ ಇತ್ತ
ಭಾಗವತರು ಭೂಲೋಕದ ಕಥೆ ಉಲಿಯಲನುವಾಗುತ್ತಾರೆ. ಚಿಕ್ಕಪ್ಪನ ದೇಖರೇಖೆಯಲ್ಲಿ ಉಂಡುಟ್ಟು ಸುಖವಾಗಿದ್ದ ಚಕೋರಿ ವಿನಂತಿ ಆತನ ಬುಲಾವಿನ ಮೇರೆಗೆ ಪ್ರವೇಶಿಸಲಾಗಿ ಚಿಕ್ಕಪ್ಪ ತೀರ್ಥಯಾತ್ರೆಗೆ, ಮಗಳು ತನ್ನ ಅಕ್ಕನೂರಿಗೆ ಪಯಣಿಸುವ ತೀರ್ಮಾನವಾಗುತ್ತದೆ. ತವರಿಗೆ ಹೊರಟು ನಿಂತ ವಿನಂತಿಯ ಕಾಲುಗಳಲ್ಲೀಗ ನವೋಲ್ಲಾಸ! ಕಾಲ್ಗೆಜ್ಜೆಗಳಲ್ಲಿ ಭೀಮ್ ಪಲಾಸ!!

ನಾ ಚಿಮ್ಮುವ ಕಾರಂಜಿಯಾದೆ
ತವರಿನೂರ ಪಯಣಕೆ...

ಈ ಪದ್ಯಕ್ಕೆ ಕಲಾವಿದ ವಂಡಾರು ಗೋವಿಂದ ತವರಿಗೆ ಹೊರಟ ಹೆಣ್ಣಿನ ಅಷ್ಟೂ ಸಂಭ್ರಮ–ಸಡಗರವನ್ನು,ಆ ಸಂತಸದ ಹೊನಲನ್ನು ತಮ್ಮ ಅಸೀಮ ಭಾವ–ಭಂಗಿಗಳಿಂದ, ಚೆಲ್ವಿಕೆಯಿಂದ, ಮಿಡುಕಿನಿಂದ,ನೃತ್ಯದಿಂದ ಪ್ರೇಕ್ಷಕನಿಗೆ ದಾಟಿಸುವಲ್ಲಿ ಸಂಪೂರ್ಣ ಯಶಕಾಣುತ್ತಾರೆ. ಕಲಾವಿದನ ಈ ಅಪೂರ್ವ ಭಾವಾಭಿವ್ಯಕ್ತಿಗೆ ಮೆಚ್ಚುಗೆಯ ಚಪ್ಪಾಳೆಗಳು. ಅಕ್ಕನಾಲಯವನ್ನು ಹೊಕ್ಕ ತಂಗಿ ವಿನಂತಿ ಖುಷಿಯ ವಿನಿಮಯದ ತರುವಾಯ ಊಟೋಪಚಾರದ ವಿಷಯ ಬರುತ್ತಲೇ, ಅಕ್ಕ ಶುಭವಂತಿಯಲ್ಲಿ ಬೆಟ್ಟದ ನೆಲ್ಲಿಯ ಉಪ್ಪಿನಕಾಯಿಯನ್ನು ನೆನೆಸಿಕೊಳ್ಳುವುದು ಹೆಣ್ಮಕ್ಕಳು ತವರನ್ನು ಯಾವ, ಯಾವ ವಸ್ತು–ವಿಷಯಗಳಿಗಾಗಿ miss ಮಾಡಿಕೊಳ್ಳುತ್ತಾರೆ ಎನ್ನುವ ಅಚ್ಚರಿಯಾಚೆ, ಈ ಹೆಣ್ಣು ಜಗತ್ತನ್ನು ಅರ್ಥೈಸಿಕೊಳ್ಳಲು ಉಳಿದ ಜಗತ್ತಿಗೇಕೆ ಸುಲಭ ಸಾಧ್ಯವಲ್ಲ ಎನ್ನುವ ಪ್ರಶ್ನೆ(?)ಗೂ ಉತ್ತರ ಎನ್ನುವಂತಿತ್ತು ಆ ಸಂಭಾಷಣೆ. ಈ ಶುಭವಂತಿಯೇ ಇಡೀ ಕಥಾನಕದ ಪ್ರಧಾನ ಪಾತ್ರ. ಅತ್ಯಂತ ಸಹಜವಾಗಿ, ಬದುಕಿನ ಭಾಗವೇ ಎನ್ನುವಂತೆ ಅಥವಾ ವಿಶಾಲಾರ್ಥದಲ್ಲಿ ಬದುಕೇ ಎನ್ನುವಂತೆ, ಯಾವ ಬಿರುದು– ಬಹುಮಾನಗಳ ದೂರದಾಸೆಯೂ ಇಲ್ಲದೆ ದಾನಗೈಯುತ್ತಲೇ ಬದುಕುವ ಶುಭವಂತಿ ದೇಹಿ ಎಂದು ಬಂದವರಿಗೆ ಇಲ್ಲ ಎನ್ನುವ

ಜಾಯಮಾನದ ಹೆಣ್ಣಲ್ಲ! ಅದೊಂದು ದಿನ ಕೊಟ್ಟು, ಕೊಟ್ಟು ಕೈ ಬರಿದಾಗಿ ನಿಂತಾಗ ಯಾರದ್ದೋ ಅಮ್ಮಾ... ದಾನ ಎನ್ನುವ ದನಿ ಕೇಳುತ್ತಲೇ ತಾನು ಅರ್ಚಿಸಿ, ಆರಾಧಿಸುವ ಜಿನೇಶ್ವರನ ಮೂರ್ತಿಯನ್ನೇ ಕೈಯೆತ್ತಿ ಕೊಟ್ಟ ದಾನ ಚಿಂತಾಮಣಿ ಶುಭವಂತಿ! ಶುಭವಂತಿಯ ಔದಾರ್ಯವನ್ನು ಪರೀಕ್ಷಿಸಲು ಸ್ವತಃ ನಾಡ ದೊರೆಯೇ ಮುಖ ಮರೆಸಿ ಬಂದಿರಲು, ಅಕ್ಕ ಶುಭವಂತಿಯ ಕೈ ಬರಿದಾಗಿರಲು, ತಂಗಿ ವಿನಂತಿ ಮೃತ್ಯು ನಿವಾರಕವೆಂದು ಧರಿಸಿರುವ ಕೊರಳಹಾರವನ್ನು ಅರೆಕ್ಷಣವೂ ಆಲೋಚಿಸದೆ ಬಿಚ್ಚಿ ಅಕ್ಕನ ಕೈಗಿತ್ತು ತಗೋ ದಾನ ನೀಡು... ಎನ್ನುವ ತ್ಯಾಗ ಪ್ರೇಕ್ಷಕನ ಹೃನ್ಮನದಲ್ಲಿ ಸ್ಥಾಯಿಯಾಗುವಂತೆ ಯಲಗುಪ್ಪ ಮತ್ತು ವಂಡಾರು ಈ ಕಲಾವಿದದ್ವಯರು ಪ್ರತಿಭೆ ಮೆರೆಯುತ್ತಾರೆ. ಚಿತ್ತೂರು ಪುರದರಸ ಕಾಳರಾತ್ರಿಯಲ್ಲಿ ಕಳ್ಳ ಕಾಕರೆದುರು ಇನ್ನೇನು ಕೈಸೋಲುವಷ್ಟರಲ್ಲಿ ಸಕಾಲದಲ್ಲಿ ಬಂದೊದಗಿ ಕಳ್ಳರ ಸದೆಬಡಿದು ದೊರೆಯ ರಕ್ಷಿಸಿದ ವೀರ ಯಾರೆಂದು ಕೇಳಿದರೆ ಆತ ದೊರೆಯ ಮಂತ್ರಿ ಮಹೋದಯನ ಮಗ ಪ್ರಸೇನ ದೇವ ಎನ್ನುವುದು ವೇದ್ಯವಾಗುತ್ತಲೇ ಸಂಪ್ರೀತನಾದ ದೊರೆ ಒಂದಿನಿತೂ ತಡಬಡಾಯಿಸದೆ ಹುಡುಗನನ್ನು ತನ್ನ ಸೇನಾ ದಂಡನಾಯಕನನ್ನಾಗಿ ನಿಯುಕ್ತಿಗೊಳಿಸುತ್ತಾನೆ.

ದಂಡ ನಾಯಕ ಪ್ರಸೇನ ದೇವನೋ ಏರುಜವನಿಕೆಯರಾದ ಶುಭವಂತಿ, ವಿನಂತಿಯರ ಅನುಪಮ ರೂಪ-ಗುಣ-ಲಾವಣ್ಯಗಳಿಗೆ ಸೋತು ಶರಣಾಗಿ ಅದೊಂದು ತಿಳಿ ಸಂಜೆ ಸಹೋದರಿಯರನ್ನು ಅಡ್ಡಗಟ್ಟಿ

ಕರವ ಮುಗಿವೆ ದೇಹಿ ನಡೆಸಿಕೊಡುವಿರೆ?

ಕರವ ಪಿಡಿದು ಎನ್ನ ಧನ್ಯನಾಗಿ ಮಾಡಿರೆ...

ಎನ್ನುತ್ತಾ ಪ್ರಮದೆಯರೆದುರು ತನ್ನ ಪ್ರೇಮನಿವೇದನೆಯನ್ನು ಮಾಡಿಯೇ ಬಿಡುತ್ತಾನೆ.ಹಾಗೆ ಪ್ರೇಮವನ್ನು ನಿವೇದಿಸಿಕೊಳ್ಳುವಲ್ಲಿ ರಸೋಲ್ಲಾಸಗಳನ್ನು ಸುರಿದು ಅಭಿನಯಿಸಿದ ಪರಿಗೆ,ಆ ಆಳ್ತನಕ್ಕೆ, ಆ ಸೌಜನ್ಯಕ್ಕೆ ಯಾರಾದರೂ ಆತನ ಪ್ರೀತಿಯನ್ನು ಒಪ್ಪಿಕೊಳ್ಳಲೇಬೇಕಿತ್ತು. ಸಹೋದರಿಯರೂ ಪ್ರಸನ್ನ I mean ಪ್ರಸೇನನ ಪ್ರೀತಿಯನ್ನು ಪುರಸ್ಕರಿಸುತ್ತಾರೆ ಆದರೆ ಒಂದು ಷರತ್ತಿನೊಂದಿಗೆ! ಶುಭವಂತಿ ಜಿನೇಶ್ವರನನ್ನೂ, ವಿನಂತಿ ಕೃಷ್ಣನನ್ನೂ ಪೂಜಿಸಲು ಪ್ರತ್ಯೇಕವಾಗಿ ಅನುವು ಮಾಡಿಕೊಟ್ಟಲ್ಲಿ ನಿಮ್ಮನ್ನು ಮದುವೆಯಾಗಲು ನಮಗಭ್ಯಂತರವಿಲ್ಲ, ನಮ್ಮಪ್ಪನೂ ಒಪ್ಪಿದರೆ ಎಂದು ಸಹೋದರಿಯರು ಮುಜುಗರದ ಮರೆಯಲ್ಲಿ ಒಪ್ಪಿಗೆ ಸೂಚಿಸುತ್ತಲೇ ಪ್ರಸೇನ ಊರಿಗೆಲ್ಲಾ ತೋರಣ ಬಿಗಿಯಲನುವಾಗುತ್ತಾನೆ.




ಪ್ರತ್ಯೇಕ ಪೂಜಾ ಕೋಣೆಗಳಲ್ಲಿ ತಮ್ಮಿಷ್ಟದ ದೇವರುಗಳಿಗೆ ಪೂಜೆ ನೆರವೇರಿಸುವುದನ್ನು ಕಂಡ ಪ್ರಸೇನ ದೇವ 'ಸೋದರಿಯರ ಏಕತೆಯ ಕಂಡು ತೋಷದಿಂ.... ಪ್ರಸಂಗದ ಏಕೈಕ ಪೂರ್ಣ ಪ್ರಮಾಣದ ಭಾಮಿನಿಗೆ ತಲೆದೂಗುತ್ತಾನೆ: ಪ್ರೇಕ್ಷಕ ಸಂದೋಹವೂ! ಶಾಂತಿ-ಪ್ರೀತಿ, ಸಹಬಾಳ್ವೆಯ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಿದೆ ಎನ್ನುವುದನ್ನು ಅರಿತ ಪ್ರಸಂಗಕರ್ತೆ ಧರ್ಮ ಸಾಮರಸ್ಯದ ಮಹತಿಯನ್ನು ಪ್ರಚುರಪಡಿಸಲು ಒಂದೇ ಸೂರಿನಡಿ ವಾಸಿಸುವ ಈರ್ವರು ತಮ್ಮ ಇಷ್ಟಾನುಸಾರ ಭಿನ್ನ ಧರ್ಮಪಾಲನೆಗೆ ಅತ್ಯಂತ ಪೂರಕ ವಾತಾವರಣವನ್ನು ಸೃಷ್ಟಿಸಿಕೊಂಡು ಜಿನ-ಕೃಷ್ಣರನ್ನು ಆರಾಧಿಸುವ ಸನ್ನಿವೇಶವನ್ನು ಸೃಜಿಸಿರಬಹುದೆ?



ಪ್ರಸೇನ ದೇವ ತನ್ನ ಇಬ್ಬರು ಮಡದಿಯರಲ್ಲಿ ಹಿರಿಯಾಕೆ ಶುಭವಂತಿಯಲ್ಲಿ ಗಂಡು ಸಂತಾನವನ್ನು ಪಡೆದು ಸಕಲ ಸುಖೋಪಭೋಗಗಳಲ್ಲಿ ಮಿಂದೇಳುತ್ತಿರುವ ಸಂದರ್ಭದಲ್ಲೇ ವೈರಿ ಪಡೆಯು ದಾಳಿಯಿಟ್ಟು, ನಡುರಾತ್ರಿಯೇ ಕರ್ತವ್ಯದ ಕರೆಗೆ ಓಗೊಟ್ಟು ಪ್ರಸೇನ ಹೊರಡಲನುವಾದಾಗ ಮಡದಿ ಶುಭವಂತಿಯೂ ರಣಾಂಗಣಕ್ಕೆ ತಾನೂ ಬರುವೆನೆನ್ನುತ್ತಾಳೆ. ಸರಿ, ಕೈಗೂಸನ್ನು ತಂಗಿ ವಿನಂತಿಯ ಸುಪರ್ದಿಗೊಪ್ಪಿಸಿ ಲಗುಬಗೆಯಿಂದ ಯುದ್ಧಭೂಮಿಯನ್ನು ಪ್ರವೇಶಿಸುತ್ತಾರೆ ಪ್ರಸೇನ-ಶುಭವಂತಿ ಸತಿಪತಿಯರು ಅಪರಾತ್ರಿಯಲ್ಲಿ! 'ಅಳಿಲೊಂದು ಅರಳಿ ಮರವನ್ನು ಏರಿದಾಕ್ಷಣ ಅಳಿಲಿಗೆ ಅರಳಿ ಮರವನ್ನು ಅಲುಗಾಡಿಸಲು ಸಾಧ್ಯವೆ ಎಂದು ಎದುರಾಳಿಗೆ ತನ್ನ ಸ್ವಸಾಮರ್ಥ್ಯದ ಮೇಲಿನ ನಂಬಿಕೆಯಿಂದ ಜರಿಯುತ್ತಾನಾದರೂ ಪ್ರಸೇನದೇವ (ಪ್ರಸನ್ನ ಶೆಟ್ಟಿಗಾರ್ ಮಾತು, ನೃತ್ಯಾಭಿನಯದಿಂದ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ) ಆತನಿಂದಲೇ ಹತನಾಗುತ್ತಾನೆ. ಕಣ್ಣೆದುರೇ ಗಂಡನ ಅಂತ್ಯವಾದರೂ ಧೃತಿಗೆಡದೆ ಶತ್ರುವನ್ನು ಹಿಮ್ಮೆಟ್ಟಿಸಿ ಗಂಡನ ಕಳೇಬರದೊಂದಿಗೆ ಶುಭವಂತಿ ಅರಮನೆಗೆ ಮರಳುವ ಹಾದಿಯಲ್ಲಿದ್ದರೆ, ಇತ್ತ ಅಂತಃಪುರದಲ್ಲಿರುವ ವಿನಂತಿ ತನ್ನ ಗಂಡ ತನಗಿಂತಲೂ ತನ್ನಕ್ಕನನ್ನೇ ಹೆಚ್ಚು ಪ್ರೀತಿಸುತ್ತಿರಬಹುದೆ? ತನ್ನನ್ನಾತ ನಗಣ್ಯಳನ್ನಾಗಿಸುತ್ತಿರಬಹುದೆ ಎಂದು ಮುಂತಾಗಿ ವಿಚಲಿತಳಾದಾಗ ಆಕೆಯ ಅಂತರಾತ್ಮ ಇಲ್ಲ ಹಾಗೇನೂ ಇಲ್ಲ, ನೀನು ಕಳವಳಪಡಬೇಕಾದುದೇನೂ ಇಲ್ಲ ಎಂದು ಆಕೆಯನ್ನು ಸಂತೈಸಿ ಸಮಾಧಾನಿಸುವುದು ಮತ್ತು ಈ ಅಂತರಾತ್ಮವೂ ಒಂದು ಪಾತ್ರವೇ ಆಗಿ ರಂಗಪ್ರವೇಶಿಸುವುದು ಆಧುನಿಕ ರಂಗಭೂಮಿಯ ಪರಿಕಲ್ಪನೆಯನ್ನು ಯಕ್ಷಗಾನ ರಂಗಭೂಮಿಯಲ್ಲೂ ಉಪಕ್ರಮಿಸಿದ ನಿರ್ದೇಶಕರ ಜಾಣ್ಮೆಯಂತೆ ಕಾಣುತ್ತದೆ.ಈಗ ಬಂದಾರು, ಇನ್ನೊಂದು ಅರೆಘಳಿಗೆಯಲ್ಲಿ ಬಂದಾರು ಎಂದು ಮೈಯೆಲ್ಲಾ ಕಣ್ಣಾಗಿ ಕಾಯುತ್ತಿದ್ದ ವಿನಂತಿಯ ಮನೆಯಂಗಳಕ್ಕೆ ಧಾವಿಸಿ ಬಂದ ರಥದ ಕುದುರೆಗಳ ಖುರಪುಟದ ಸದ್ದು, ಖುದ್ದು ಕಾದ ಸೀಸದಷ್ಟೇ ಬರಸಿಡಿಲಿನ

ವಾರ್ತೆಯನ್ನು ಕಿವಿಗಡರಿಸಿತ್ತು. ವಿಜಯಶಾಲಿಗಳಾಗಿ ಬಂದವರಿಗೆ ಬೆಳಗಲೆಂದು ಸಿದ್ಧಪಡಿಸಿದ ಆರತಿ ತಟ್ಟೆಯ ಬೆಳಕು ಆರಿತ್ತು! ಪತಿ ಪ್ರಸೇನ ದೇವ ಇಹಲೋಕದ ಯಾತ್ರೆ ಮುಗಿಸಿದ್ದನ್ನು ಉಮ್ಮಳಿಸುತ್ತಿರುವ ದುಃಖದ ನಡುವಲ್ಲೇ ಅಕ್ಕ ಉಸುರುವಾಗ ತಂಗಿ ಒಂದೇಟಿಗೆ ಧರಾಶಾಹಿಯಾಗುವ ಬಾಳೆಮರದಂತೆ ಧರಾಶಾಹಿಯಾಗುತ್ತಾಳೆ. ಅರಮನೆಯ ತುಂಬೆಲ್ಲಾ ಶೋಕದ್ದೇ ಅನುರಣನ! ಇಲ್ಲಿ ಮತ್ತೊಮ್ಮೆ ಯಲಗುಪ್ಪ–ವಂಡಾರರ ಅಭಿನಯ ಪ್ರತಿಭೆಯ ವಿರಾಟ್ದರ್ಶನವಾಗುತ್ತದೆ. ಗಂಡನಿಲ್ಲದ ತಾನು ಈ ಭುವಿಯಲ್ಲಿ ಬದುಕಲಾರೆ ಎನ್ನುತ್ತಲೇ ಸಹಗಮನಕ್ಕನುವಾಗುತ್ತಾಳೆ ವಿನಂತಿ. ಈ ಸಂದರ್ಭದಲ್ಲಿ ಭಾವಶೂನ್ಯಳಾಗಿ, ತುಂಬು ಮುತ್ತೈದೆಯ ಶೃಂಗಾರದೊಂದಿಗೆ ನಿರ್ಲಿಪ್ತತೆಯಿಂದ ಗಂಡನ ಚಿತೆಯೆಡೆಗೆ ನಡೆಯುವ ವಿನಂತಿಯಾಗಿ ವಂಡಾರು ಗೋವಿಂದರೊಳಗಿನ ಸಂವೇದನಾಶೀಲ ಕಲಾವಿದ ಪೂರ್ಣವಾಗಿ ಅಭಿವ್ಯಕ್ತಗೊಳ್ಳುತ್ತಾನೆ! (ಪೂರಕ ರಂಗಸ್ಥಳದಲ್ಲಿ ಸಹಗಮನದ ದೃಶ್ಯವನ್ನು ಬೆಳಕಿನ ಪರಿಣಾಮಕಾರಿ ಬಳಕೆಯಿಂದ ಇನ್ನಷ್ಟು ಸೊಗಸಾಗಿಸುವ ಸಾಧ್ಯತೆಯಿತ್ತು)

ಹೀಗೆ ಕಡು ವಿಷಾದದ ಮಡುವಿನಲ್ಲಿ ಪ್ರೇಕ್ಷಕ ಗಡಣ ಮುಳುಗಿರುವಾಗಲೆ ರಂಗದ ಮೇಲೆ ಮಿಂಚಿನ ಸಂಚಾರದಂತಹ ಜೋಡಿ ವೇಷಗಳು: ವಿಶ್ವನಾಥ ಹೆನ್ನಾಬೈಲು ಹಾಗೂ ಹರೀಶ ಜಪ್ತಿ. ಇಲ್ಲಿ ಕಥೆ ಮಗ್ಗುಲು ಬದಲಾಯಿಸುತ್ತದೆ. ಈ ಈರ್ವರು ತರುಣ ಕಲಾವಿದರು ಬಹುವಂಗಗಳಲ್ಲಿ ಪರಸ್ಪರರನ್ನು ಮೆಚ್ಚುವ ಭಾವಾಭಿನಯದಲ್ಲಿ ಹಠಕ್ಕೆ ಬಿದ್ದವರಂತೆ ರಂಗಸ್ಥಳದ ಬಿಸಿಯೇರಿಸುತ್ತಾರೆ.




ತನಗೆ ಕವಿತೆ ಬರೆಯುವ ಒಲವಿದೆ. ಕವಿತೆಗಳ ಮೂಲಕ ತಾನೊಬ್ಬ ಉದ್ದಾಮ ಕವಿಯಾಗಬೇಕು ಎನ್ನುವ ಹಂಬಲದ ಪನ್ನಗ ಸ್ಫೂರ್ತಿಗಾಗಿ ಪ್ರಕೃತಿ ಮಡಿಲಿಗೆ ಹೊರಟರೆ, ಅಲ್ಲಿ ಪ್ರಕೃತಿಯನ್ನೇ ನಾಚಿಸುವ ಕಾಂತಿ, ಕುಂತಿಯರೆಂಬ ಸ್ಫುರದ್ರೂಪಿಯರು ಇದಿರಾಗುತ್ತಾರೆ. ಇವರನ್ನು ಇದಿರುಗೊಳ್ಳುವ ಪೂರ್ವದಲ್ಲಿ ಕಾಂತಿ, ಕುಂತಿಯರು ಪ್ರಾಕೃತಿಕ ಸೊಬಗನ್ನು ವರ್ಣಿಸುವ ನೃತ್ಯವೂ ಚೇತೋಹಾರಿಯಾಗಿತ್ತು. ನೃತ್ಯ ಚಲಿಸುವ ಕಾವ್ಯದಂತಹ ಪ್ರಸ್ತುತಿ ಅದು.ಈ ಪದ್ಯದಲ್ಲಿ ಸಮಶ್ರುತಿಯ ಚಮತ್ಕಾರವನ್ನೂ ಹಿಮ್ಮೇಳದವರು ಸ್ಫುರಿಸಿದ್ದರಿಂದ ಪ್ರೇಕ್ಷಕನಿಗೆ ಹಬ್ಬ! ಕಾಂತಿ, ಕುಂತಿಯರ ಅನುಪಮ ಸೌಂದರ್ಯಾತಿಶಯಕ್ಕೆ ಮೂಕ ವಿಸ್ಮಿತರಾದ ಗೆಳೆಯರು ತರುಣಿಯರನ್ನು ಮಾತಿಗೆಳೆದರೆ ಅವರೀರ್ವರೂ ಮೂಕರು! ಪನ್ನಗ ಸ್ವರ ಸಂವೇದಿನಿ ರಾಗ ಹಾಡುವುದರೊಂದಿಗೆ ಕಾಂತಿ ಮಾತು ಪಡೆಯುತ್ತಾಳಾದರೂ ಸಖೇದಾಶ್ಚರ್ಯವೆನ್ನುವಂತೆ ಕುಂತಿ ಆ ಕ್ಷಣವೇ ಕುಸಿದುಬಿದ್ದು




ಮರಣವನ್ನಪ್ಪುತ್ತಾಳೆ. ಜಿನೋದಕ ಪ್ರೋಕ್ಷಣೆಯಿಂದ ಕುಂತಿ ಮರುಜೀವ ಪಡೆಯುವುದರೊಂದಿಗೆ ಎಲ್ಲವೂ ಸುಖಾಂತ್ಯವಾಗುತ್ತದೆ. ಈ ಪ್ರಕ್ರಿಯೆಯ ನಡುವೆ ನಾಟಕೀಯ ತಿರುವುಗಳಲ್ಲಿ ಶುಭವಂತಿ ಮತ್ತೊಮ್ಮೆ ಖಡ್ಗ ಹಿಡಿಯಬೇಕಾಗುತ್ತದೆ. ಶುಭವಂತಿ ಅರಸೊತ್ತಿಗೆಯ ಉಳಿವಿಗಾಗಿ ಹೋರಾಡಿ ಜಯಿಸಿದ್ದನ್ನು ಸ್ಮರಣೀಯವಾಗಿಸಲು ಸ್ವರ್ಣಾಭಿಷೇಕಕ್ಕೆ ನಿಶ್ಚಯಿಸುತ್ತಾರಾದರೂ ಅದು ಯಾಕೋ ಪ್ರಸ್ತುತಗೊಳ್ಳಲೇ ಇಲ್ಲ (ಇದು ಕೂಡ ಆಖ್ಯಾನದ ಆಕರ್ಷಣೆಗಳಲ್ಲೊಂದು ಎಂದು ಪ್ರಚಾರ ಮಾಡಲಾಗಿತ್ತು)

ದಾನ, ತ್ಯಾಗವನ್ನೇ ಉಸಿರಾಗಿಸಿಕೊಂಡ ಸಹೋದರಿಯರನ್ನು ಕೇಂದ್ರವಾಗಿಸಿಕೊಂಡ ದಾನ ಚಿಂತಾಮಣಿ ಪ್ರಸಂಗವನ್ನು ಪ್ರಸಂಗಕರ್ತೆ, ನಿರ್ದೇಶಕರ ಆಶಯ ಭಂಗವಾಗದಂತೆ ಪ್ರಬುದ್ಧ ಕಲಾವಿದರು ಪರಿಶುದ್ಧ ಯಕ್ಷಗಾನವನ್ನಾಗಿಸಿದರು. ಬೆಳಕು ಹಾಗೂ ಧ್ವನಿಯ ನಿರ್ವಹಣೆಯಲ್ಲಿ ಇನ್ನೊಂಚೂರು ವೃತ್ತಿಪರತೆ ಬೇಕೆನಿಸಿತು. ಸಭಾಂಗಣದಲ್ಲೂ ರಂಗಸ್ಥಳವನ್ನು ರೂಪಿಸಿದ್ದು ಸಂಘಟಕರಿಗೆ ಯಕ್ಷಗಾನ ಕಲಾ ಪ್ರಕಾರದ ಕುರಿತಾದ ಶ್ರದ್ಧೆ, ಗೌರವದ ಪ್ರತೀಕ. ಪ್ರಸಂಗದಲ್ಲಿ ಬಳಸಲಾದ ದೇವರ ವಿಗ್ರಹಗಳನ್ನು 'ಯಕ್ಷಗಾನೀಯ'ವಾಗಿಸಿದ್ದರೆ ಚೆನ್ನಿತ್ತು. ಆಹಾರ್ಯ, ವೇಷಭೂಷಣಗಳ ಕುರಿತು ಮಾತಿಲ್ಲ.

ಪ್ರಸಂಗಕರ್ತೆ ಸ್ವತಃ ಹೆಣ್ಣಾಗಿಯೂ ಬಹುಪತ್ನಿತ್ವ, ಸಹಗಮನದಂತಹ, ಈ ಕಾಲಕ್ಕೊಲ್ಲದ ಆದರ್ಶಗಳನ್ನು ಮುನ್ನೆಲೆಯಲ್ಲಿ ಪ್ರದರ್ಶನಕ್ಕನುವು ಮಾಡಿಕೊಟ್ಟಿದ್ದು ಮತ್ತು ಅದೇ ಪ್ರಸಂಗದ ವಿಶೇಷ ಆಕರ್ಷಣೆ ಎಂದು ಬಿಂಬಿತವಾಗಿದ್ದು ಕವಿಯ ಸ್ವಾತಂತ್ರ್ಯದ ಹೊರತಾಗಿಯೂ ಕಥೆಯ ಕಾಲಘಟ್ಟ ಸ್ಪಷ್ಟವಿಲ್ಲದಿರುವಾಗ, ಕಥೆಯೂ ಆ ಸನ್ನಿವೇಶಗಳನ್ನು ಬೇಡದಿರುವಾಗ ಎಷ್ಟರಮಟ್ಟಿಗೆ ಉಚಿತ ಎನ್ನುವ ಪ್ರಶ್ನೆ ಪ್ರದರ್ಶನದ ನಂತರ ಪ್ರೇಕ್ಷಕನನ್ನು ಕಾಡದಿರದು. ಪ್ರಸಂಗ ಪಾತ್ರಗಳು ಸಂದರ್ಭೋಚಿತವಾಗಿ ರಾಮಾಯಣ, ಮಹಾಭಾರತದ ಪಾತ್ರಗಳನ್ನು ಉದಾಹರಿಸುತ್ತಿದುದರಿಂದ ದಾನ ಚಿಂತಾಮಣಿಯ ಕಥೆ ರಾಮಾಯಣ, ಮಹಾಭಾರತದ ಕಾಲಘಟ್ಟದ್ದಂತೂ ಆಗಿರಲಿಕ್ಕಿಲ್ಲ. ಸುಬ್ರಹ್ಮಣ್ಯ ಹೆಗಡೆ ಯಲಗುಪ್ಪರಂತಹ ಕಲಾವಿದ ಶುಭವಂತಿಯ ಪಾತ್ರ ಪೋಷಿಸಿದ್ದಾಗ್ಯೂ ಈ ಪಾತ್ರ ಅಭಿನಯ, ನೃತ್ಯಗಳಿಗೆ ಹೆಚ್ಚು scope ಇಲ್ಲದೆ ಪೇಲವ ಅನಿಸಿದ ಸಂದರ್ಭಗಳೂ ಪ್ರಸಂಗದಲ್ಲಿದ್ದವು. ಪಾತ್ರ ಸ್ವಭಾವತಃ ಗಂಭೀರ ಮತ್ತು ಪ್ರಧಾನವಾಗಿರುವ ಕಾರಣದಿಂದಲೂ ಈ ಅನಿವಾರ್ಯತೆ ಸೃಷ್ಟಿಯಾಗಿರಬಹುದೇನೋ.

ದಾನ ಚಿಂತಾಮಣಿಯನ್ನು ಆಡಿಸಿದ ಹಿಮ್ಮೇಳಕ್ಕೆ ಪೂರ್ಣ ಅಂಕಗಳು. ಪ್ರಸಂಗ




ಸಾಹಿತ್ಯದಲ್ಲಿನ ಬನಿ ಮತ್ತು ಆ ಸಾಹಿತ್ಯವನ್ನು ಬೇಗಡೆ, ಹಿಂದೋಳ, ಶಂಕರಾಭರಣಗಳಲ್ಲಿ ವಿಸ್ತಾರಗೊಳಿಸಿದ್ದು ಸುಶ್ರಾವ್ಯವಾಗಿತ್ತು. ಅನವಶ್ಯಕ ಆವರ್ತನ, ಆಲಾಪಗಳಿಲ್ಲದಿರುವುದೂ ಭಾಗವತದ್ವಯರ ಹೆಚ್ಚುಗಾರಿಕೆ. 'ದೊಡ್ಡ ಭಾಗವತರು'ಗಳಿಗೆ ಎಲ್ಲಿಯೂ ತೊಡಕಾಗದಂತೆ ಚಂಡೆ, ಮದ್ದಳೆಯ ಸಾಥ್ ನೀಡಿದ ಕಲಾವಿದರುಗಳೂ ಅಭಿನಂದನಾರ್ಹರು. ಪೋಷಕ ಕಲಾವಿದರುಗಳು ಕೂಡ ಪ್ರದರ್ಶನದ ಒಟ್ಟಂದಕ್ಕೆ ಪೂರಕವಾಗಿ ಸ್ಪಂದಿಸಿದ್ದರು. ಹಾಸ್ಯ ಕಲಾವಿದರದ್ದು really good try. ಮಳೆಗಾಲದ ಆರಂಭದಲ್ಲೇ ಬ್ರಹ್ಮಾವರ ಕೇಂದ್ರಿತ ಪರಿಸರದ ಯಕ್ಷಗಾನಾಸಕ್ತರಿಗೆ ಮನರಂಜನೆಯ ಸೋನೆ ಸುರಿಸಿದ ವಂಡಾರಿನ ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ ಗೆ ಮೆಚ್ಚುಗೆ.

***ಲೇಖಕರು ಉದಯ ಶೆಟ್ಟಿ, ಪಡುಕರೆ, *****15037***

---

## ಹವ್ಯಾಸಿ ರಂಗಭೂಮಿಯ ಸವ್ಯಸಾಚಿ – ತೋನ್ಸೆ ಜಯಂತ ಕುಮಾರ ಒಂದು ನೆನಪು



ಬಡಗುತಿಟ್ಟಿನ ಶ್ರೇಷ್ಠ ಮಟ್ಟದ ಹವ್ಯಾಸಿ ಕಲಾವಿದ ಯಕ್ಷ ಗುರು ತೋನ್ಸೆ ಜಯಂತ ಕುಮಾರ್ ಮೊನ್ನೆ ಜೂನ್ 26ರಂದು ನಮ್ಮನ್ನು ಅಗಲಿದ್ದಾರೆ. ಸುದೀರ್ಘ 40 ವರ್ಷದ ಅವರ ಒಡನಾಡಿ ಆಗಿ ಇದು ಅವರಿಗೆ ಸಲ್ಲಿಸುವ ನುಡಿ ನಮನ.

ಮಣ್ಣಿನ ಗುಣ, ಮನೆತನದ ಗುಣ ರಕ್ತದ ಗುಣ ಇವೆಲ್ಲ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರುತ್ತವೆ. ತೋನ್ಸೆಯ ಮಣ್ಣಿಗೂ ಒಂದು ಸಾಧನೆಯ ಗುಣವಿದೆ. ತೋನ್ಸೆಯ ಪೈ ಕುಟುಂಬದವರು ಅಸಾಧ್ಯವನ್ನೂ ಸಾಧಿಸಿ ತೋರಿಸಿದವರು. ಕಲ್ಯಾಣಪುರ ಗ್ರಾಮದ ತೋನ್ಸೆಯ ಹೊನ್ನಪ್ಪ ಕುದುರಿನಲ್ಲಿ ಯಕ್ಷಗಾನದಲ್ಲಿ ಅಸಾಧ್ಯವನ್ನು ಸಾಧಿಸಿ ತೋರಿಸಿದ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಚಲಿಸುವ ಯಕ್ಷಭಂಡಾರ ತೋನ್ಸೆ ಕಾಂತಪ್ಪ ಮಾಸ್ತರ್ ಚಲುವಮ್ಮ ದಂಪತಿಗಳ ಪುತ್ರನಾಗಿ 1946 ರಂದು ಜನಿಸಿದ ಜಯಂತ ಕುಮಾರರು ಮಗುವಾಗಿರುವಾಗಲೇ ಕೇಳಿದ್ದು ಚಂಡೆ ಮದ್ದಳೆ ನಾದವನ್ನು. ತೊಟ್ಟಿಲಲ್ಲಿ ಮಲಗಿರುವಾಗಲೇ ನೋಡಿದ್ದು ಚಾವಡಿಯಲ್ಲಿ ತೂಗುಹಾಕಿದ ಚಂಡೆ ಮದ್ದಳೆಯನ್ನು, ನಡೆದಾಡಿದ್ದೇ ಯಕ್ಷಗಾನದ ಲಯದಲ್ಲಿ. ರಕ್ತದ ಗುಣ ಪೂರಕ ವಾತಾವರಣ ಯಕ್ಷಗಾನದ ಸವ್ಯಸಾಚಿಯಾಗಿ ಬೆಳೆಯಲು ಇಷ್ಟೇ ಸಾಕಾಯಿತು. ಇವರ ದೊಡ್ಡಪ್ಪ ಗೋಳಿಗರಡಿ ಮೇಳದಲ್ಲಿ 25 ವರ್ಷ ಭಾಗವತರಾಗಿ ಮದ್ದಳೆವಾದಕರಾಗಿ ದುಡಿದವರು.

ಕೆಮ್ಮಣ್ಣಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ಅಭ್ಯಾಸ. ಹೈಸ್ಕೂಲು ವಿದ್ಯಾಭ್ಯಾಸದೊಂದಿಗೆ ತಂದೆ ನೆಡೆಸುತಿದ್ದ ಸಂಘಗಳಿಗೆ ತೆರಳಿ ಯಕ್ಷಗಾನ ಅಭ್ಯಾಸಕ್ಕೆ ತೊಡಗಿದರು. ಬಹು ಬೇಗನೇ ಚಂಡೆ ಮದ್ದಳೆ ವಾದನ ಕಲಿತರು. ಮಗನ ಸಹಜ ಪ್ರತಿಬೆ ಗುರುತಿಸಿದ ಸ್ವತಹ ಶಿಕ್ಷಕ ಕಾಂತಪ್ಪ ಮಾಸ್ತರರು ತನ್ನಲ್ಲಿರುವುದನ್ನೆಲ್ಲಾ ಧಾರೆ ಎರೆದರು. ಹಂಗಾರಕಟ್ಟೆ ಚೇತನಾ ಪ್ರೌಢ ಶಾಲೆಯಲ್ಲಿ ಗುಮಾಸ್ತರಾಗಿ ಸೇರಿಕೊಂಡ ಇವರಿಗೆ ಪ್ರಸಿದ್ದ ಹವ್ಯಾಸಿ ಕಲಾವಿದ ಶ್ರೀಧರ ಹಂದೆಯವರ ಗೆಳೆತನ ಹಾರುವ ಹಕ್ಕಿಗೆ ರೆಕ್ಕೆ ಬಂದಂತಾಯಿತು. ಕುಂದಾಪುರ ಪರಿಸರದ ಹವ್ಯಾಸಿ ಸಂಘಗಳಲ್ಲಿ ವೇಷಧಾರಿಯಾಗಿ ಗುರುತಿಸಿಕೊಂಡರು. ಎಂ.ಎ.ಹೆಗ್ಡೆಯವರ ಕಲಾವರ್ಧಕ ಸಂಸ್ಥೆಯ ಖಾಯಂ ಕಲಾವಿದರಾಗಿ ಗುರುತಿಸಿಕೊಂಡರು. ಆರಂಭದಲ್ಲಿ ಜಯಂತಕುಮಾರರಿಗೆ ಹೆಸರು ಬಂದಿದ್ದೇ ವೇಷಧಾರಿಯಾಗಿ. ವೃಷಸೇನ, ಅಭಿಮನ್ಯು, ದ್ರೌಪದಿ, ಪ್ರಭಾವತಿ, ಮೀನಾಕ್ಷಿ, ಪದ್ಮಗಂಧಿ ಪ್ರಮೀಳೆ, ಹನುಮಂತ ಪಾತ್ರಗಳು ಅವರಿಗೆ ಕೀರ್ತಿ ತಂದ ಪಾತ್ರಗಳು. ನಾರ್ಣಪ್ಪ ಉಪ್ಪೂರರ ಅಮೃತೇಶ್ವರಿ ಮೇಳಕ್ಕೂ ಎಂ.ಎ.ಹೆಗ್ಡೆಯವರ ಸಂಘಕ್ಕೂ ನಡೆದ ಜೋಡಾಟದಲ್ಲಿ ಮೂರು ಪ್ರಸಂಗದ ಪ್ರಭಾವತಿ, ವೃಷಸೇನ ಹಾಗೂ ಮೀನಾಕ್ಷಿ ಪಾತ್ರವನ್ನು ನಿರ್ವಹಿಸಿ ಉಪ್ಪೂರರ ಹಾಗೂ ಎಂ.ಎ.ಹೆಗ್ಡೆಯವರ ಮೆಚ್ಚುಗೆಗೆ ಪಾತ್ರರಾಗಿದ್ದರು.

ಯಕ್ಷಗಾನದಲ್ಲಿ ಉಪ್ಪೂರರ ಶೈಲಿ ಎನ್ನುವಲ್ಲಿ ತನ್ನತನ ಮೆರೆದ ನಾರ್ಣಪ್ಪ ಉಪ್ಪೂರ ಮತ್ತು ಬೇಳೆಂಜೆ ತಿಮ್ಮಪ್ಪ ನಾಯ್ಕರ ಶಿಷ್ಯರಾಗಿ ಪೌರಾಣಿಕ ಪ್ರಸಂಗಗಳನ್ನು ಹೇಗೆ ಭಾವಾನುಗುಣವಾಗಿ ರಂಗಾನುಕೂಲಿಯಾಗಿ ಮಾಡಬಹುದೆಂಬುದನ್ನು ಕಲಿತುಕೊಂಡರು. ಸಮಕಾಲೀನ ಯಕ್ಷಗಾನದಲ್ಲಿ ಉಪ್ಪೂರ ಶೈಲಿಗೆ ಜ್ವಲಂತ ಉದಾಹರಣೆ ಜಯಂತಕುಮಾರರು. ಅದೇ ಸ್ವರ ಅದೇ ಶೈಲಿ ಅದೇ ರಂಗತಂತ್ರ. ಅನೇಕ ಭಾಗವತರು ಉಪ್ಪೂರರ ಶೈಲಿಯಲ್ಲಿ ಹಾಡುವವರು ಕುಂಜಾಲು ಶೈಲಿಯಲ್ಲಿ ಹಾಡಲಾರರು. ಕುಂಜಾಲು ಶೈಲಿಯಲ್ಲಿ ಹಾಡುವವರು ಉಪ್ಪೂರರ ಶೈಲಿಯಲ್ಲಿ ಹಾಡಲಾರರು. ಎರಡೂ ಶೈಲಿಯಲ್ಲಿ ಪರಿಪೂರ್ಣವಾಗಿ ಹಾಡಬಲ್ಲ ನಾವಡರಂತ ಕೆಲವೇ ಕೆಲವು ಭಾಗವತರಲ್ಲಿ ಜಯಂತ ಕುಮಾರರು ಒಬ್ಬರು. ಕರ್ಣಾರ್ಜುನ, ಮೀನಾಕ್ಷಿ ಕಲ್ಯಾಣ, ಶಶಿಪ್ರಭಾ ಪರಿಣಯ ಮುಂತಾದ ಪ್ರಸಂಗಗಳಲ್ಲಿ ಇವರ ಕುಂಜಾಲು ಶೈಲಿ, ಜಾಂಬವತಿ ಕಲ್ಯಾಣ, ಚೂಡಾಮಣಿ, ಭಸ್ಮಾಸುರ ಮೋಹಿನಿ ಮುಂತಾದ ಪ್ರಸಂಗಗಳಲ್ಲಿ ಇವರು ಬಳಸುತ್ತಿದ್ದ ಉಪ್ಪೂರ ಶೈಲಿಗಳು ಈ ಎರಡು ಶೈಲಿಗಳಲ್ಲಿ ಇವರಿಗಿದ್ದ ಪ್ರಬುದ್ಧತೆಯನ್ನು ತೋರಿಸುತ್ತದೆ. ಗುರುವಾಗಿ ನಿರ್ದೇಶಕರಾಗಿ ಭಾಗವತರಾಗಿ ನೃತ್ಯ ಶಿಕ್ಷಕರಾಗಿ ನಾಡಿನ ಅನೇಕ ಸಂಘ ಸಂಸ್ಥೆಗಳಿಗೆ ಮಕ್ಕಳ ಮೇಳಕ್ಕೆ, ಮಹಿಳಾ ಸಂಘಕ್ಕೆ ದಶಕಗಳ ಕಾಲ ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ಇವರು ಸಲ್ಲಿಸಿದ ಸೇವೆ ಗಮನಾರ್ಹ. ಗುರು ಬನ್ನಂಜೆ ನಾರಾಯಣರ ಮದ್ದಳೆ ಕೆಮ್ಮಣ್ಣು ಆನಂದರ ಚಂಡೆಯ ಇವರ ಹಿಮ್ಮೇಳ ಎಂಬತ್ತರ ದಶಕದಲ್ಲಿ ಬಹುಬೇಡಿಕೆಯ ಹಿಮ್ಮೇಳವಾಗಿತ್ತು. ಅನೇಕ ಶಾಲಾ ಕಾಲೇಜುಗಳ ವಾರ್ಷಿಕೋತ್ಸವಕ್ಕೆ ಮಕ್ಕಳಿಂದ ಯಕ್ಷಗಾನ ಮಾಡಿಸುವಲ್ಲಿ ಈ ಮೂವರ ಕೊಡುಗೆ ಅಪಾರ. ತಾನೇ ಕಟ್ಟಿದ ಅನೇಕ ಸಂಘ ಸಂಸ್ಥೆಗಳಿಂದ ಗುರುವಂದನೆ ಪಡೆದ ಇವರು ನಿವೃತ್ತಿಯ ನಂತರವೂ ಸಕ್ರಿಯವಾಗಿ ಯಕ್ಷಗಾನದಲ್ಲಿ ತೊಡಗಿಸಿಕೊಂಡವರು. ಉಡುಪಿಯ ಯಕ್ಷಗಾನ ಕಲಾರಂಗದ ಯಕ್ಷಶಿಕ್ಷಣದ ಪ್ರಮುಖ ಗುರುಗಳಲ್ಲಿ ಇವರೂ ಒಬ್ಬರು. ಪತ್ನಿ ವಿನೋದ ಮೂವರು ಪುತ್ರರ ಸಂತೃಪ್ತ ಜೀವನ ಇವರದ್ದು. ಇವರ ತಮ್ಮ ಪುಷ್ಕಳ ಕುಮಾರರು ಯಕ್ಷಗಾನದಲ್ಲಿ ಇವರ ಶಿಷ್ಯರೇ

ಆಗಿದ್ದು ಸುಗಮ ಸಂಗೀತ ಮತ್ತು ಹರಿಕಥೆಯಲ್ಲಿ ಪ್ರಸಿದ್ದರು. ಕರ್ನಾಟಕ ನಾಟಕ ಅಕಾಡೆಮಿ ರಂಗ ಭಾರತಿ ಪ್ರಶಸ್ತಿ, ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಉಡುಪಿ ಯಕ್ಷಗಾನ ಕಲಾರಂಗ ಪ್ರಶಸ್ತಿ, ತಾನೆ ಗುರುಗಳಾಗಿ ಸೇವೆ ಸಲ್ಲಿಸಿದ ಮಠಪಾಡಿ ಕಿದಿಯೂರು ಉದ್ಯಾವರ ಸಹಿತ ನೂರಾರು ಸಂಘ ಸಂಸ್ಥೆಗಳು ಅವುಗಳ ಸುವರ್ಣ ಮಹೋತ್ಸವದಂದು ಅದ್ದೂರಿಯಾಗಿ ಸನ್ಮಾನಿಸಿದ ಸಹಿತ ದೇಶಾದ್ಯಂತ ಅನೇಕ ಪ್ರಶಸ್ತಿ ಸನ್ಮಾನಗಳಿಗೆ ಭಾಜನರಾದ ಇವರು ವಿದೇಶದಲ್ಲೂ ಯಕ್ಷಗಾನದ ಕಂಪನ್ನು ಹರಡಿದ್ದಾರೆ. ಪೂರ್ವಜರು ಸೇವೆ ಸಲ್ಲಿಸಿದ ಗೋಳಿಗರಡಿ ಮೇಳದ ವತಿಯಿಂದ ನೀಡಲ್ಪಡುವ ಚಂದುಪೂಜಾರಿ ಪ್ರಶಸ್ತಿ ಸಹಜವಾಗಿಯೇ ಅವರಿಗೆ ಸಂದಿತ್ತು.



***ಲೇಖಕರು: ಪ್ರೊ.ಎಸ್.ವಿ.ಉದಯ ಕುಮಾರ ಶೆಟ್ಟಿ. ಮಣಿಪಾಲ***

# ಧೀರ ಕಲೆಯೊಳಗೆ ಕೀರವಾಣಿಯರು – 14

**ಯಕ್ಷಗಾನದ ಕಲಾವಿದೆ, ತಾಳಮದ್ದಳೆ ಅರ್ಥಧಾರಿ, ಯಕ್ಷಶಿಕ್ಷಕಿ, ಪ್ರಸಂಗಕರ್ತೆ – ಶ್ರೀಮತಿ ನಿರ್ಮಲಾ ಮಂಜುನಾಥ ಹೆಗಡೆ ಗೋಳಿಕೊಪ್ಪ**

'ಸಣ್ಣ ಪ್ರಾಯದಲ್ಲಿ ಕಲಿತದ್ದು ಬಂತು' ಅರ್ಥಾತ್ ಬಾಲ್ಯದಲ್ಲಿ ಕಲಿತ ವಿದ್ಯೆ ಮಾತ್ರ ನಮಗೊಲಿಯುವುದಕ್ಕೆ ಸಾಧ್ಯ ಎಂಬ ಮಾತನ್ನು ಹಿಂದಿನಿಂದಲೂ ಕೇಳುತ್ತಾ ಬಂದಿದ್ದೇವೆ. ಅದೇ ಎಳವೆಯಲ್ಲಿ ನಮಗೆ ಆಸಕ್ತಿಯಿರುವ ವಿದ್ಯೆಯನ್ನು ಕಲಿಯುವುದಕ್ಕೆ ಪ್ರೋತ್ಸಾಹವೋ, ಅವಕಾಶವೋ ಇಲ್ಲದೇ ಇದ್ದಾಗ, ಅದು ಸಿಕ್ಕಿದ ಸಮಯಕ್ಕೆ ಉಪಯೋಗಿಸಿಕೊಳ್ಳಬೇಕು. ಅವಕಾಶದ ಬಾಗಿಲು ಯಾವಾಗಲೂ ತೆರೆದೇ ಇರುವುದಿಲ್ಲ. ಅದು ತೆರೆದಾಗ ನಾವು ಅವಕಾಶವನ್ನು ಬಾಚಿ ಪಡಕೊಳ್ಳಬೇಕು. ಹೀಗೆ ತನ್ನ 32 ನೇ ವಯಸ್ಸಿನಲ್ಲಿ ಯಕ್ಷಗಾನವನ್ನು ಕಲಿತು 2007 ನೇ ಇಸವಿಯಲ್ಲಿ ಯಕ್ಷಗಾನ ಕ್ಷೇತ್ರವನ್ನು ಪ್ರವೇಶ ಮಾಡಿದವರು ಶ್ರೀಮತಿ ನಿರ್ಮಲಾ ಮಂಜುನಾಥ ಹೆಗಡೆ ಗೋಳಿಕೊಪ್ಪ ಇವರು.

ಶ್ರೀ ಶಂಭು ಗಣೇಶ ಭಟ್ಟ ಮತ್ತು ಶ್ರೀಮತಿ ರುಕ್ಮಿಣಿ ಶಂಭು ಭಟ್ಟ ಇವರ ಮಗಳಾಗಿ ದಿನಾಂಕ 06/09/1973 ರಂದು ಶಿರಸಿ ತಾಲೂಕಿನ ನಡಗೋಡಿನಲ್ಲಿ ನಿರ್ಮಲಾ ಹೆಗಡೆಯವರ ಜನನ. ದ್ವಿತೀಯ ಪಿಯುಸಿವರೆಗಿನ ವಿದ್ಯಾಭ್ಯಾಸ. 1992 ರಲ್ಲಿ ಮಂಜುನಾಥ ಹೆಗಡೆ ಗೋಳಿಕೊಪ್ಪ ಇವರನ್ನು ವಿವಾಹವಾದ ಬಳಿಕ ಇವರ ಯಕ್ಷಕಲಾ ಜೀವನಕ್ಕೆ ಒಂದರ್ಥದಲ್ಲಿ ಪ್ರವೇಶ ದೊರಕಿತು ಎನ್ನಬಹುದು. ಶ್ರೀ ಸುಬ್ರಾಯ ಭಟ್ಟ ಗಡಿಗೆಹೊಳೆಯವರ ನಿರ್ದೇಶನದ ಕಾಶ್ಯಪ ಪ್ರತಿಷ್ಠಾನ ಗಡಿಗೆಹೊಳೆ ಸಂಸ್ಥೆಯಲ್ಲಿ ಗುರುಗಳಾದ ಶ್ರೀ ಗಣಪತಿ ಭಾಗ್ವತ ಕವಾಳೆಯವರಿಂದ ಯಕ್ಷಗಾನ ಕಲಿಕೆಯನ್ನು ಪ್ರಾರಂಭಿಸುತ್ತಾರೆ. 'ಭಸ್ಮಾಸುರ ಮೋಹಿನಿ' ಪ್ರಸಂಗದ ಕರಟಕಾಸುರನಾಗಿ 2008 ರಲ್ಲಿ ಮೊದಲ ವೇಷದೊಂದಿಗೆ ಯಕ್ಷರಂಗವನ್ನು ಪ್ರವೇಶಿಸುತ್ತಾರೆ.

ಯಕ್ಷಗಾನ ಕಲಾವಿದೆಯಾಗಿ ತೊಡಗಿಸಿಕೊಂಡದ್ದು ಮಾತ್ರವಲ್ಲದೇ ಆಸಕ್ತ ಮಹಿಳಾ ಕಲಾವಿದೆಯರ ಮತ್ತು ಮಕ್ಕಳ ತಂಡದ ಜೊತೆಗೆ ತಾಳಮದ್ದಳೆ ಕ್ಷೇತ್ರದಲ್ಲೂ ತೊಡಗಿಸಿಕೊಂಡವರು ಇವರು. ಆರಂಭದಲ್ಲಿ ವರ್ಷಕ್ಕೆ ಐದರಿಂದ ಆರು ತಾಳಮದ್ದಳೆ, ಹತ್ತರಿಂದ ಹದಿನೈದು ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ ಇವರ ತಂಡಕ್ಕೆ ದೊರೆಯುತ್ತಾ ಇತ್ತು. ಕ್ರಮೇಣ ವರ್ಷದಲ್ಲಿ ಸುಮಾರು 50 ಕ್ಕೂ ಹೆಚ್ಚು ಯಕ್ಷಗಾನ ಪ್ರದರ್ಶನಗಳನ್ನು ನೀಡುತ್ತಾರೆ. 'ಕಾಲಚಕ್ರ' ಎನ್ನು ನಾಟಕದಲ್ಲೂ, 'ಒಲವೇ ಜೀವನ ಸಾಕ್ಷಾತ್ಕಾರ' ಎನ್ನುವ ಧಾರಾವಾಹಿಯಲ್ಲೂ ನಟಿಸಿರುವವರು ಇವರು.

ಕರಟಕಾಸುರ, ಭಸ್ಮಾಸುರ, ಪಾರ್ವತಿ, ಮೋಹಿನಿ, ಪ್ರಭಾವತಿ, ಮೀನಾಕ್ಷಿ, ಕೃಷ್ಣ, ದಕ್ಷ, ದಾಕ್ಷಾಯಿಣಿ, ಅಂಬೆ, ಭೀಷ್ಮ, ಪರಶುರಾಮ, ಸತ್ಯಭಾಮೆ, ಹನೂಮಂತ ಮುಂತಾದ ವಿವಿಧ ಸ್ತ್ರೀ ಹಾಗೂ ಪುರುಷ ಪಾತ್ರಗಳನ್ನು ಬೇರೆ ಪ್ರಸಂಗಗಳಲ್ಲಿ ನಿರ್ವಹಿಸಿ ಜನಮೆಚ್ಚುಗೆ ಗಳಿಸಿದ್ದಾರೆ.

2017 ರ ಜೂನ್ 25 ಕ್ಕೆ "ಯಕ್ಷಗೆಜ್ಜೆ(ರಿ)" ಮಹಿಳಾ ಮತ್ತು ಮಕ್ಕಳ ತರಬೇತಿ ಕೇಂದ್ರವನ್ನು ಸ್ಥಾಪಿಸುತ್ತಾರೆ. ಈ ಕೇಂದ್ರದಡಿಯಲ್ಲಿ ಆಸಕ್ತರಿಗೆ ಸಾಂಪ್ರದಾಯಿಕ ಯಕ್ಷಗಾನ ಕುಣಿತಗಳ ತರಬೇತಿಯನ್ನು ನೀಡುತ್ತಾರೆ. ತರಬೇತಿ ಕೇಂದ್ರ ಪ್ರಾರಂಭಿಸಿದ 4 ವರ್ಷಗಳಲ್ಲೇ ಮಕ್ಕಳ ಹಾಗೂ ಮಹಿಳೆಯರ 125 ಕ್ಕೂ ಯಕ್ಷಗಾನ ಪ್ರದರ್ಶನಗಳನ್ನು ನೀಡಿರುತ್ತಾರೆ.







ರಾಜ್ಯಮಟ್ಟದ ಕೃಷಿಮೇಳ, ಮಹಿಳಾ ಯಕ್ಷೋತ್ಸವ, ಅಖಿಲ ಭಾರತ ಯಕ್ಷಗಾನ ಉತ್ಸವ ಮುಂತಾದ ಅನೇಕ ಸಮ್ಮೇಳ, ಸಮಾವೇಶ, ಸಾಂಸ್ಕೃತಿಕ ಉತ್ಸವಗಳೇ ಮೊದಲಾದ ದೊಡ್ಡ ವೇದಿಕೆಗಳಲ್ಲಿ , ಶಿರಸಿ ತಾಲೂಕಲ್ಲದೇ ಹಳಿಯಾಳ , ಧಾರವಾಡ, ಶಿವಮೊಗ್ಗ, ಸಾಗರ, ಕಾರವಾರ, ಕೈಗಾ, ಬಿಣಗಾ, ಅಂಕೋಲಾ, ಹೊನ್ನಾವರ, ಕುಮಟಾ, ಬೆಂಗಳೂರು, ಹೈದರಾಬಾದ್, ಗೋವಾ, ಕಟೀಲು, ಪುತ್ತೂರು , ಮರವಂತೆ, ಕಾರ್ಕಳ, ದೆಹಲಿ, ದಾಂಡೇಲಿ ಮೊದಲಾದ



ಸಾಯಿಸುಮಾ ಎಂ ನಾವುಡ

ಅನೇಕೆಡೆಗಳಲ್ಲಿ ಯಕ್ಷಗಾನ ಪ್ರದರ್ಶನವನ್ನು ನೀಡಿದ ಹೆಗ್ಗಳಿಕೆ ಇವರದು ಹಾಗೂ ಇವರ ತಂಡದ್ದು. 'ಸ್ವರ್ಣವಲ್ಲೀ ಸಂಸ್ಕೃತೋತ್ಸವ'ದಲ್ಲಿ ಶ್ರೀ ಎಂ. ರಾಜಗೋಪಾಲಾಚಾರ್ಯ ವಿರಚಿತ ಸಂಸ್ಕೃತ ಗದಾಯುದ್ಧ ಯಕ್ಷಗಾನ ಪ್ರದರ್ಶನವನ್ನು ಕೂಡ ಇವರು ನೀಡಿದ್ದಾರೆ. ತಮ್ಮ "ಯಕ್ಷಗೆಜ್ಜೆ" ಸಂಸ್ಥೆಯ ನೇತೃತ್ವದಲ್ಲಿ ಯಕ್ಷಗಾನ ವೇಷಭೂಷಣ, ಮುಖವರ್ಣಿಕೆ ಮತ್ತು ರಂಗನಡೆಗಳ ಕಾರ್ಯಾಗಾರ, ಮಕ್ಕಳಿಂದ ಪೂರ್ವರಂಗ ಮತ್ತು ಒಡ್ಡೋಲಗ ನೃತ್ಯ ಪ್ರದರ್ಶನ, ಮಹಿಳೆಯರಿಗಾಗಿ ತಿಂಗಳಿಗೊಂದು ತಾಳಮದ್ದಳೆ –ಕಲಿಕೆ ಹಾಗು ಪ್ರದರ್ಶನ, ಪ್ರತೀ ವರ್ಷದ ಯಕ್ಷಗೆಜ್ಜೆ ವಾರ್ಷಿಕೋತ್ಸವದಲ್ಲಿ ಹಿರಿಯ ಸಾಧಕರಿಗೆ ಸನ್ಮಾನ ಮುಂತಾದ ಕಾರ್ಯಗಳನ್ನು ಆಯೋಜನೆ ಮಾಡಿದವರು ನಿರ್ಮಲಾ ಹೆಗಡೆಯವರು. ನಿರ್ಮಲಾ ಹೆಗಡೆಯವರು ಕಲಾವಿದೆ ಮಾತ್ರವಲ್ಲದೇ ಸಾಹಿತ್ಯ ಕ್ಷೇತ್ರದಲ್ಲೂ ಬಹಳಷ್ಟು ಆಸಕ್ತಿ ಉಳ್ಳವರು. ಇವರು ಬರೆದ ಎರಡು ಕವನ ಸಂಕಲನಗಳೂ ಪ್ರಕಟಗೊಂಡಿವೆ. ಯಕ್ಷರಂಗ, ಕಣಿಪುರ, ಯಕ್ಷದೀಪ, ಸ್ವರ್ಣವಲ್ಲಿ ಪ್ರಭಾ, ಸಂಪದ ಸಾಲು ಮುಂತಾದ ಪತ್ರಿಕೆಗಳಿಗೆ ಅಂಕಣ ಹಾಗೂ ಲೇಖನಗಳನ್ನು ಬರೆದ ಹಿರಿಮೆ ಇವರದು. "ಯಕ್ಷಗೆಜ್ಜೆ" ಅನ್ನುವ ಬ್ಲಾಗ್ ನಲ್ಲಿ ಹಿರಿಯ ಕಲಾವಿದರ ಕುರಿತಾಗಿ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಕನ್ನಡ ಸಾಹಿತ್ಯ ಮಾತ್ರವಲ್ಲದೇ ಯಕ್ಷಗಾನ ಸಾಹಿತ್ಯದಲ್ಲೂ ಇವರು ಕೈಯಾಡಿಸಿದವರು ನಿರ್ಮಲಾ ಹೆಗಡೆ.

2018 ರಲ್ಲಿ 'ದುಷ್ಯಂತ – ಶಕುಂತಲೆ' ಯಕ್ಷಗಾನ ಪ್ರಸಂಗ ರಚನೆಯನ್ನು ಮಾಡಿ, ಪ್ರದರ್ಶನವನ್ನೂ ನೀಡುತ್ತಾರೆ. ಈ ಪ್ರಸಂಗ ಸುಮಾರು 15 ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಾಣುತ್ತದೆ. ಇದು ಮಾತ್ರವಲ್ಲದೇ ಗಜಾನನ ಜನನ, ಶ್ರೀ ಶಂಕರ ದಿಗ್ವಿಜಯ, ತುಳಸಿ ವಿವಾಹ, ಅಗ್ನಿಸಂಭವೆ ಎನ್ನುವ ಯಕ್ಷಗಾನ ಪ್ರಸಂಗಗಳನ್ನು ಇವರು ಬರೆದಿದ್ದಾರೆ.

ಚಂದನ ವಾಹಿನಿಯಲ್ಲಿ, ನೂತನ ಟಿವಿ ವಾಹಿನಿಯಲ್ಲಿ, ಆಕಾಶವಾಣಿ ಕಾರವಾರದಲ್ಲಿ ಇವರ ಸಂದರ್ಶನಗಳು ಪ್ರಸಾರವಾಗಿವೆ. ಇವರ ಸಾಧನೆಯನ್ನು ಗುರುತಿಸಿ ಅನೇಕ ಸಂಘ–ಸಂಸ್ಥೆಗಳು ಇವರನ್ನು ಗೌರವಿಸಿವೆ. ಮೀಯಾರ್ಡ್ಸ್ ಸಂಸ್ಥೆಯಿಂದ ಪ್ರಶಸ್ತಿ, ಹವ್ಯಕ ಸಾಧಕಿ ಪ್ರಶಸ್ತಿ, ಪುತ್ತೂರು ಸಾಹಿತ್ಯ ವೇದಿಕೆಯಿಂದ ಕಲಾಶಾರದೆ ಪ್ರಶಸ್ತಿ, ವೆಂಟೋ ಕಂಪೆನಿಯಿಂದ ಮಹಿಳಾ ಸಾಧಕಿ ಪ್ರಶಸ್ತಿ, ಸೇವಾರತ್ನ ಮಾಹಿತಿ ಸೇವಾಸಂಸ್ಥೆ ಕಾನಸೂರಿನಿಂದ ಕಲಾಸಿಂಧು ಪ್ರಶಸ್ತಿ, ಅಕ್ಕನಮನೆ ಪ್ರಕಾಶನ ಬೆಂಗಳೂರು ಇವರಿಂದ ದೇಸೀ ದಿಬ್ಬಣ ಕಲಾಸಿರಿ ಪ್ರಶಸ್ತಿ ಮುಂತಾದವುಗಳು ಇವರ ಪಾಲಿಗೆ ಲಭಿಸಿವೆ. 2020ರಲ್ಲಿ ಯಕ್ಷಗಾನ ಅಕಾಡೆಮಿ ಸದಸ್ಯೆಯಾಗಿ ಆಯ್ಕೆಯಾಗಿ, ಶಿರಸಿಯಲ್ಲಿ ಮಹಿಳಾ ಯಕ್ಷೋತ್ಸವ, ಅನೇಕ ತರಬೇತಿ ಶಿಬಿರಗಳು ಮತ್ತು ಹಿರಿಯರ ನೆನಪು ಅನ್ನುವ ಕಾರ್ಯಕ್ರಮಗಳನ್ನು ಇವರು ಆಯೋಜಿಸಿರುತ್ತಾರೆ. ಪತಿ ಶ್ರೀ ಮಂಜುನಾಥ ಹೆಗಡೆ ಗೋಳಿಕೊಪ್ಪ ಹಾಗೂ ಮಗಳು ಪೂಜಾ ಇವರ ಸಹಕಾರದೊಂದಿಗೆ ಶ್ರೀಮತಿ ನಿರ್ಮಲಾ ಹೆಗಡೆಯವರ ಕಲಾಸೇವೆ ಇನ್ನಷ್ಟು ಮುಂದುವರಿಯಲಿ ಎಂಬ ಸದಾಶಯ ನಮ್ಮದು.

# ತುಳು ಲಿಪಿಯಲ್ಲಿ ರಚನೆಯಾದ ಅಪ್ಪೆ ಅಂಜನೆ ಪೌರಾಣಿಕ ಪ್ರಸಂಗ

"ಅಪ್ಪೆ ಅಂಜನೆ" ಎಂಬ ಹೆಸರಿನಲ್ಲೇ ಒಂದು ಒಳ್ಳೆಯ ಆಕರ್ಷಣೆ ಇದೆ" ಎಂದು ನುಡಿದ ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಪ್ರಸಂಗದ ಪ್ರಥಮ ಪ್ರಯೋಗಕ್ಕೆ ಶುಭ ಹಾರೈಸಿದರು. ಮಂಗಳೂರು ವಿಶ್ವವಿದ್ಯಾನಿಲಯ, ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ, ವಿವಿ ಸಂಧ್ಯಾ ಕಾಲೇಜು ಮಂಗಳೂರು, ಶ್ರೀ ಮಂಜುನಾಥೇಶ್ವರ ತುಳು ಪೀಠ, ಶ್ರೀ ಸಂಸ್ಥಾನ ಒಡಿಯೂರು ತುಳು ಅಧ್ಯಯನ ಕೇಂದ್ರ, ನಾದನೂಪುರ ಯಕ್ಷೋತ್ಥಾನ ಟ್ರಸ್ಟ್ ವಂಡಾರು ಇದರ ಆಶ್ರಯದಲ್ಲಿ ಜೂನ್ 1ರಂದು ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಶ್ರೀಗಳು ಭಾಗವಹಿಸಿ ಆಶೀರ್ವಚನ ನೀಡಿದರು. ಈ ಸಂದರ್ಭ ತುಳು ವೆಬಿನಾರ್ ಗಳ ಸಂಗ್ರಹ, ಗೇನದ ಗೆಜ್ಜೆ–ನೂದನೇ ಪಜ್ಜೆ, ಶ್ರೀ ಮಂಜುನಾಥೇಶ್ವರ ತುಳು ಪೀಠದ 30 ನೇ ವರ್ಷದ ನೆನಪಿನ ಸಂಚಿಕೆ 'ತ್ರಿಂಶತಿ ತಿರುಳು' ಮತ್ತು ಶುಭಾಶಯ ಜೈನ್ ವಿರಚಿತ ತುಳು ಯಕ್ಷಗಾನ ಪ್ರಸಂಗ 'ಅಪ್ಪೆ ಅಂಜನೆ' ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.





ನಂತರ ಬೆಂಕಿನಾಥೇಶ್ವರ ಕೃಪಾಪೋಷಿತ ದಶಾವತಾರ ಯಕ್ಷಗಾನ ಮಂಡಳಿಯ ಸದಸ್ಯರಿಂದ ವಿಶೇಷ ಆಕರ್ಷಣೆಗಳೊಂದಿಗೆ 'ಅಪ್ಪೆ ಅಂಜನೆ' ಯಕ್ಷಗಾನ ಪ್ರಸಂಗದ ಚೊಚ್ಚಲ ಪ್ರದರ್ಶನ ನಡೆಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ. ಲಕ್ಷ್ಮೀ ದೇವಿ ಆರ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ ಹಾಗೂ ತುಳು ಎಂಎ ವಿಭಾಗದ ಸಂಯೋಜಕ ಡಾ. ಮಾಧವ ಎಂ.ಕೆ, ನಾದನೂಪುರ ಯಕ್ಷೋತ್ಥಾನ ಟ್ರಸ್ಟ್ ನ ಸ್ಥಾಪಕಾಧ್ಯಕ್ಷ ಗೋವಿಂದ ವಂಡಾರು, ಬೆಂಕಿನಾಥೇಶ್ವರ








ಯಕ್ಷಗಾನ ಮಂಡಳಿಯ ಸುರೇಂದ್ರ ಮಲ್ಲಿ, ಪ್ರವೀಣ್ ಕುಮಾರ್ ಕೊಡಿಯಾಲ್ ಬೈಲ್, ಮೋಹನ್ ಪಡಿವಾಳ್, ಉಪಸ್ಥಿತರಿದ್ದರು. ಉಪನ್ಯಾಸಕಿ ಜಯಲಕ್ಷ್ಮಿ ಆರ್ ಶೆಟ್ಟಿ ಸ್ವಾಗತಿಸಿ ಗೀತಾ ಜೈನ್ ವಂದಿಸಿದರು.

## ಕೆರೋಡಿ ಸುಬ್ಬರಾಯರ ಯಕ್ಷಗಾನ ಪ್ರಸಂಗ ಕೃತಿಗಳು



ಕೆರೋಡಿ ಸುಬ್ಬರಾಯರು(1863–1928) ಒಬ್ಬ ಹಿರಿಯ ಯಕ್ಷಗಾನ ಲೇಖಕ ಮತ್ತು ಪ್ರಸಂಗಕರ್ತ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕೆರೋಡಿ ಗ್ರಾಮದಲ್ಲಿ 1863 ರಲ್ಲಿ ಜನಿಸಿದ ಇವರು ಉಡುಪಿಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಕೃಷಿ, ಸಾಹಿತ್ಯ, ಪತ್ರಿಕೋದ್ಯಮ, ಯಕ್ಷಗಾನ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ ಎ ಪದವಿ ಪಡೆದಿದ್ದರು. ಯಕ್ಷಗಾನ ವಿಷಯದ ಬಗ್ಗೆ ಪತ್ರಿಕೆಗಳಲ್ಲಿ ಪ್ರಥಮವಾಗಿ ವಿಮರ್ಶಾತ್ಮಕ ಲೇಖನಗಳನ್ನು ಬರೆದ ಕೀರ್ತಿ ಇವರದ್ದು. ರಂಗಭೂಮಿ ಮಾಸಪತ್ರಿಕೆಯ 1925 ಅಕ್ಟೋಬರ್ ಸಂಚಿಕೆಯಲ್ಲಿ ಯಕ್ಷಗಾನ ಎನ್ನುವ ಶೀರ್ಷಿಕೆಯಲ್ಲಿ ಪ್ರಥಮ ಲೇಖನ ಪ್ರಕಟವಾಯಿತು. ನಂತರ ಇದೇ ಪತ್ರಿಕೆಯಲ್ಲಿ 1928ರವರೆಗೆ ಇವರ ಹಲವು ವಿಮರ್ಶಕಾತ್ಮಕ ಲೇಖನಗಳು ಪ್ರಕಟವಾದವು.

ಕೆರೋಡಿಯವರು ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದರು. ಜರಾಸಂಧವಧೆ, ಪಾಂಡವ ದಿಗ್ವಿಜಯ ಮತ್ತು ಪಲಾಂಡು ಚರಿತ್ರೆ ಇವರು ರಚಿಸಿದ ಯಕ್ಷಗಾನ ಪ್ರಸಂಗ ಕೃತಿಗಳು. ಇವರು ಕವಿ ಪರಮೇಶ್ವರ ಭಟ್ಟರು(ಕಾಲ ಸುಮಾರು 1650)ರಚಿಸಿದ ಕಾಲನೇಮಿ ಕಾಳಗ ಮತ್ತು ಪ್ರಭಾವತಿ ಸ್ವಯಂವರ ಯಕ್ಷಗಾನ ಕೃತಿಗಳನ್ನು ಸಂಪಾದಿಸಿದ್ದರು. ಮಹಾಭಾರತ ಕಥೆಯನ್ನು ಆಧರಿಸಿ ಕೆರೋಡಿ ಸುಬ್ಬರಾಯರು ರಚಿಸಿದ ಜರಾಸಂಧ ವಧೆ ಪ್ರಸಂಗ 175 ಪದ್ಯಗಳಿಂದ ರಚಿತವಾಗಿದ್ದುಕೃಷ್ಣನು ಭೀಮಾರ್ಜುನರೊಡಗೂಡಿ ಜರಾಸಂಧನೆಂಬ ರಾಕ್ಷಸನನ್ನು ಸಂಹರಿಸಿದ ಕಥಾನಕವನ್ನು ಹೊಂದಿದೆ. ಪಾಂಡವ ದಿಗ್ವಿಜಯ ಯಕ್ಷಗಾನ ಪ್ರಸಂಗವು 106 ಪದ್ಯಗಳಿಂದ ಕೂಡಿದ್ದು ರಾಜಸೂಯ ಯಾಗ ಮಾಡಲು ಬೇಕಾದ ಧನ ಸಂಪಾದನೆಗಾಗಿ ಭೀಮಾರ್ಜುನ ನಕುಲಸಹದೇವರು ರಾಜಾಧಿರಾಜರನ್ನು ಯುದ್ಧದಲ್ಲಿ ಸೋಲಿಸಿ ಕಪ್ಪಕಾಣಿಕೆ ಪಡೆದುಬಂದ ಕಥೆಯನ್ನು ಒಳಗೊಂಡಿದೆ. ಪಲಾಂಡು ಚರಿತ್ರೆ ಸ್ವಕಪೋಲ ಕಲ್ಪಿತವಾದ ನವೀನ ವಸ್ತುವೊಂದನ್ನು ಆಧರಿಸಿ ರಚಿತವಾದ ಪ್ರಸಂಗ ಕೃತಿ. ಕರೋಡಿಯವರ ಪಲಾಂಡು ಚರಿತ್ರೆ ಒಂದು ವಿಡಂಬನ ಗ್ರಂಥ. ಹಾಸ್ಯರಸದ ಹೊನಲು ಕೃತಿಯ ಉದ್ದಕ್ಕೂ ಹರಿದಿದೆ. 152 ಪದ್ಯಗಳಿಂದ ರಚಿತವಾದ ಈ ಯಕ್ಷಗಾನ ಕೃತಿ ಈಶ್ವರನು ಪಾರ್ವತಿಗೆ ಈರುಳ್ಳಿಯ ಪುರಾಣವನ್ನು ಹೇಳುವ ವಿನೂತನ ಕಥಾವಸ್ತುವನ್ನು ಒಳಗೊಂಡಿದೆ. ಈರುಳ್ಳಿ, ಬೆಳ್ಳುಳ್ಳಿ, ಮಾವು, ಕುಂಬಳ, ಶುಂಠಿ, ಗೆಣಸು ಮೊದಲಾದ ತರಕಾರಿ ಹಣ್ಣುಗಳೇ ಈ ಪ್ರಸಂಗದಲ್ಲಿ ಪಾತ್ರಗಳು ಜರಾಸಂಧವಧೆ ಪ್ರಸಂಗ ಕೃತಿಯನ್ನು 1929 ರಲ್ಲಿ ಮತ್ತು ಪಲಾಂಡು ಚರಿತ್ರೆಯನ್ನು 1930 ರಲ್ಲಿ ಪ್ರಥಮ ಬಾರಿಗೆ ಉಡುಪಿಯ ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯದವರು ಪ್ರಕಟಿಸಿದ್ದಾರೆ. ಕರ್ನಾಟಕ ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರು ಡಾ ಹಾ ತಿ ಕೃಷ್ಣೇಗೌಡ ಅವರ ಸಂಪಾದಕತ್ವದಲ್ಲಿ ಕೆರೋಡಿ ಸುಬ್ಬರಾಯರ ಯಕ್ಷಗಾನಗಳು ಮತ್ತು ಲೇಖನಗಳು ಎನ್ನುವ ಕೃತಿಯನ್ನು 2020ರಲ್ಲಿ ಪ್ರಕಟಿಸಿದೆ. ಇದರಲ್ಲಿ ಕೆರೋಡಿ ಸುಬ್ಬರಾಯರು ಬರೆದ ಮೂರು ಯಕ್ಷಗಾನ ಪ್ರಸಂಗಗಳು ಮತ್ತು ಎಂಟು ವಿದ್ವತ್ಪೂರ್ಣ ಯಕ್ಷಗಾನ ಲೇಖನಗಳು ಪ್ರಕಟವಾಗಿದೆ. ಹಿರಿಯ ಯಕ್ಷಗಾನ ವಿದ್ವಾಂಸ ಡಾ ಕಬ್ಬಿನಾಲೆ ವಸಂತ ಭಾರದ್ವಜರು ತಮ್ಮ ಯಕ್ಷಗಾನ ಕವಿ ಕಾವ್ಯ ವಿಚಾರ ಕೃತಿ (ಪ್ರಕಟಣೆ 2021 )ಯಲ್ಲಿ ಕೂಡ ಕೆರೋಡಿ ಸುಬ್ಬರಾಯರ ಯಕ್ಷಗಾನ ಪ್ರಸಂಗ ಕೃತಿಗಳ ಅವಲೋಕನ ಮಾಡಿದ್ದಾರೆ. ***ಲೇಖಕರು: ಉಮೇಶ ಶಿರೂರು, ಬೆಂಗಳೂರು 9448353910***

## ಅರುವ ಮೇಳದ ತಿರುಗಾಟದ ಬೆರಗು– ಮೇಳ ದರ್ಪಣ ಸಂಚಿಕೆ – 3

ಶ್ರೀ ಸೋಮನಾಥೇಶ್ವರೀ ಯಕ್ಷಗಾನ ಮಂಡಳಿ ಅರುವ ಅಥವಾ ಅಳದಂಗಡಿ ಮೇಳವು ತೆಂಕು–ಬಡಗು ತಿಟ್ಟಿನ ಸುಪ್ರಸಿದ್ಧ ಕಲಾವಿದರಾಗಿದ್ದ ದಿ.ಅರುವ ನಾರಾಯಣ ಶೆಟ್ಟರಿಂದ ಸ್ಥಾಪಿಸಲ್ಪಟ್ಟಿತು. 1982 ರಲ್ಲಿ ಪ್ರಾರಂಭಗೊಂಡ ಅರುವ ಮೇಳವು, ತನ್ನ ತಿರುಗಾಟ ನಡೆಸಿದ್ದು ಅಲ್ಪ ಕಾಲದ ವರೆಗೆ ಮಾತ್ರ. 8 ವರ್ಷಗಳ ಕಾಲ ತಿರುಗಾಟ ನಡೆಸಿ ನಂತರ, ತನ್ನ ತಿರುಗಾಟ ನಿಲ್ಲಿಸಿತು. ಇದಕ್ಕೆ ಕಾರಣ ಆರ್ಥಿಕ ತೊಂದರೆ, ಕಲಾವಿದರ ಸಮಸ್ಯೆ, ಬುಕ್ಕಿಂಗ್ ಕೊರತೆ ಇರಬಹುದೇನೋ? ಆದರೂ ಅರುವ ಮೇಳದ ತಿರುಗಾಟ ಕೇವಲ ಎಂಟು ವರ್ಷಗಳ ಕಾಲ ಮಾತ್ರವಾದರೂ, ಟೆಂಟ್ ಮೇಳವಾಗಿ ಯಕ್ಷರಂಗದಲ್ಲಿ ಉತ್ತಮ ಹೆಸರು ಗಳಿಸಿ ಸಂಚಲನ ಮೂಡಿಸಿದ್ದು ಸುಳ್ಳಲ್ಲ. ಹೊಸ ಡೇರೆ, ಆಸನ, ರಂಗಸ್ಥಳ ವ್ಯವಸ್ಥೆ, ಉತ್ತಮ ಕಲಾವಿದರ ಜೋಡಣೆ ಇವನ್ನೆಲ್ಲಾ ಮೇಳೈಸಿ, ತನ್ನ ಪ್ರಥಮ ತಿರುಗಾಟದಲ್ಲಿ ಅರುವ ನಾರಾಯಣ ಶೆಟ್ಟಿಯವರು, ಇದೀಗ ಉತ್ತಮ ಪ್ರಸಂಗಕರ್ತರಾಗಿ ಬೆಳೆದಿರುವ, ಕಟೀಲು ಮೇಳದ ಸುಪ್ರಸಿದ್ಧ ಕಲಾವಿದರಾದ ತಾರಾನಾಥ ವರ್ಕಾಡಿಯವರು ರಚಿಸಿದ "ಪರಕೆದ ಪಿಂಗಾರ" ಎಂಬ ಹೊಸ ತುಳು ಪ್ರಸಂಗವನ್ನು ಪ್ರಧಾನ ಪ್ರಸಂಗವಾಗಿ ಪ್ರದರ್ಶನ ನೀಡಿತು. "ಪರಕೆದ ಪಿಂಗಾರ" ಪ್ರಸಂಗ ತಾರಾನಾಥ ವರ್ಕಾಡಿಯವರ ಎರಡನೇ ಅಥವಾ ಮೂರನೇ ಪ್ರಸಂಗ ಇರಬಹುದೇನೋ? (ಇದೀಗ ವರ್ಕಾಡಿಯವರ ಪ್ರಸಂಗ ರಚನೆ

40 ಕ್ಕೂ ಮಿಕ್ಕಿವೆ.) ಉತ್ತಮ ಕಥಾಹಂದರ, ಅತ್ಯುತ್ತಮ ಕಲಾವಿದರ ಶ್ರೇಷ್ಠ ನಿರ್ವಹಣೆ, ಹೊಸತನ ಬಯಸುವ ಪ್ರೇಕ್ಷಕರ ಅಭಿಮತ-ಇವುಗಳಿಂದಾಗಿ "ಪರಕೆದ ಪಿಂಗಾರ" ಪ್ರಸಂಗವು ಅಂದು ಗಲ್ಲಾಪೆಟ್ಟಿಗೆಯಲ್ಲಿ ದಾಖಲೆ ನಿರ್ಮಿಸಿತು. ಪ್ರಥಮ ತಿರುಗಾಟದಲ್ಲೇ "ಪರಕೆದ ಪಿಂಗಾರ" 140ಕ್ಕೂ ಅಧಿಕ ಪ್ರದರ್ಶನ ಕಂಡಿತ್ತು. ಈ ಕಾಲದಲ್ಲಿ, ಅಂದರೆ, ಅರುವ ಮೇಳದ ಪ್ರಥಮ ತಿರುಗಾಟದಲ್ಲಿ ಕುಬಣೂರು ಶ್ರೀಧರ್ ರಾವ್, ಶಂಕರನಾರಾಯಣ ಕಾರಂತ, ಶ್ರೀಮತಿ ಲೀಲಾವತಿ ಬೈಪಡಿತ್ತಾಯರಂಥಹ ದಿಗ್ಗಜರು ಭಾಗವತಿಕೆಯ ವೈಭವ ಹೆಚ್ಚಿಸಲು ಕಾರಣರಾದರು. ಹರಿನಾರಾಯಣ ಬೈಪಡಿತ್ತಾಯರಂಥಹ ಮದ್ದಲೆ ವಾದಕರೂ ಹಿಮ್ಮೇಳ ವೈಭವಕ್ಕೆ ದೊಡ್ಡ ಕಾಣಿಕೆ ಸಲ್ಲಿಸಿದ್ದರು. ಮುಮ್ಮೇಳದಲ್ಲಿ ಸುಪ್ರಸಿದ್ಧ ಹಾಸ್ಯ ಕಲಾವಿದರಾದ ಪೆರುವೊಡಿ ನಾರಾಯಣ ಭಟ್, ಅರುವ ನಾರಾಯಣ ಶೆಟ್ಟಿ, ಕಾಂಚನ ಸಂಜೀವ ರೈ, ಪುಂಜಾಲುಕಟ್ಟೆ ಧರ್ಣಪ್ಪ ಶೆಟ್ಟಿ, ದೇಲಂಪುರಿ ನಾರಾಯಣ ರೈ, ಪೊಳಲಿ ಲೋಕಯ್ಯ, ಸರಪಾಡಿ ಅಶೋಕ ಶೆಟ್ಟಿ, ಕುರ್ನಾಡು ಶಿವಣ್ಣ, ಉಮೇಶ್ ಹೆಬ್ಬಾರ್, ತಾರಾನಾಥ ವರ್ಕಾಡಿ, ಸರಪಾಡಿ ವಿಠಲ ಶೆಟ್ಟಿ, ಅರುವ ಶ್ರೀಧರ್ ಭಟ್, ಪದ್ಮನಾಭ ಗೌಡ ಮುಂತಾದವರಿದ್ದರು. ಪ್ರಸಂಗದ ಪ್ರಧಾನ ಪಾತ್ರವಾದ ಚಿತ್ರ-ಚಂದನ-ಮಲ್ಲಿಗೆಯ ಪಾತ್ರದಲ್ಲಿ ಸರಪಾಡಿ ಅಶೋಕ ಶೆಟ್ಟಿ (ಕೆಲವೊಮ್ಮೆ ಅರುವ ನಾರಾಯಣ ಶೆಟ್ಟಿ) ಕಾಂಚನ ಸಂಜೀವ ರೈ-ಉಮೇಶ್ ಹೆಬ್ಬಾರರ ಪಾತ್ರ ನಿರ್ವಹಣೆ ಇಂದಿಗೂ ನಾನು ನೆನಪಿಸುವಷ್ಟು ಮಟ್ಟಿಗೆ ಅತ್ಯುತ್ತಮವಾಗಿತ್ತು. ಪೂರ್ವರ್ಧದ ಚಿತ್ರ-ಚಂದನರಾಗಿ ಸರಪಾಡಿ ವಿಠ್ಠಲ ಶೆಟ್ಟಿ-ತಾರಾನಾಥ ವರ್ಕಾಡಿಯವರು ಮಿಂಚಿದ್ದರು. ಗುರುಗಳ ಪಾತ್ರದಲ್ಲಿ ಪೆರುವೊಡಿ ನಾರಾಯಣ ಭಟ್ಟರ ಶ್ರೇಷ್ಠ ನಿರ್ವಹಣೆ ಮರೆಯುವ ಹಾಗೆಯೇ ಇಲ್ಲ. ಇನ್ನೊಂದು ವಿಶೇಷವೆಂದರೆ, ಈ ಪ್ರಸಂಗದಲ್ಲಿ ಸರಪಾಡಿ ಅಶೋಕ ಶೆಟ್ಟಿ ಹಾಗೂ ತಾರಾನಾಥ ವರ್ಕಾಡಿಯವರು ಒಂದೊಂದು ಹಾಸ್ಯ ಪಾತ್ರವನ್ನೂ ಚೆನ್ನಾಗಿ ನಿರ್ವಹಿಸಿದ್ದರು. ಕುಬಣೂರು ಶ್ರೀಧರ ರಾವ್ ರವರು ಹಾಡುತ್ತಿದ್ದ "ಏರ್ ಬಾಲೆ", "ಬಿರ್ವ ಕುಲೊಟು ಪುಟ್ಟಿನಂಚಿ" ಶ್ರೀಮತಿ ಲೀಲಾವತಿ ಬೈಪಡಿತ್ತಾಯರು ಹಾಡುತ್ತಿದ್ದ "ಕಿರಿಕಿರಿ ಮಲ್ಪಡಯಾ ನಿನ್ನನ್ ಪೊರುಲುಡೇ ತಾಂಕುವೆಯಾ" ಹಾಗೂ ಸರಪಾಡಿ ಶಂಕರನಾರಾಯಣ ಕಾರಂತರು ಹಾಡುತ್ತಿದ್ದ "ಕಾಮನ ಕರ್ಪುದ ಪಗರಿದ ಬೇನೆಡ್ ವ್ಯಭಿಚಾರಿ ಆಯೆ ಚಿತ್ರೆ" ಮುಂತಾದ ಪದ್ಯಗಳು ಇಂದಿಗೂ ನನ್ನ ನೆನಪಲ್ಲಿ ಉಳಿದಿದೆ. ಈ ಪ್ರಸಂಗವನ್ನು ನಾನು ಹತ್ತಕ್ಕೂ ಹೆಚ್ಚು ಬಾರಿ ವೀಕ್ಷಿಸಿದ್ದೆ, ಮಾತ್ರವಲ್ಲ, ಈ ಪ್ರಸಂಗವನ್ನು ಎಸ್.ಕೆ.ಮೂಡುಬಿದಿರೆ ಇವರು ಕ್ಯಾಸೆಟ್ ಮೂಲಕ ಯಕ್ಷಲೋಕಕ್ಕೆ ಸಮರ್ಪಿಸಿದ್ದರು. ಈ ಆಡಿಯೋವನ್ನು ನಾನು ಹಲವಾರು ಬಾರಿ ಕೇಳಿದ್ದೇನೆ ಮಾತ್ರವಲ್ಲ, ಈ ಹಾಡುಗಳು ಇವತ್ತಿಗೂ ನನಗೆ ಕಂಠಪಾಠವಾಗಿದೆ. ಇದನ್ನು ಕೇಳಿದ, ಪ್ರಸಂಗಕರ್ತರಾದ ತಾರಾನಾಥ ವರ್ಕಾಡಿಯವರೂ ಮೆಚ್ಚಿದ್ದರು. ಎರಡನೇ ಪ್ರಸಂಗವಾಗಿ "ದೇವೆರೆಗ್ ಅರ್ಪಣೆ" ತುಳು ಪ್ರಸಂಗವನ್ನು ಆಯ್ದುಕೊಳ್ಳಲಾಗಿತ್ತು. ಈ ಪ್ರಸಂಗವು ಕರ್ಣನ ಕುರಿತಾದ ಪೌರಾಣಿಕ ಪ್ರಸಂಗವಾಗಿದ್ದು, ಪದ್ಯವನ್ನು ತುಳು ಭಾಷೆಯಲ್ಲಿ ರಚಿಸಿ, ತುಳುವಿನಲ್ಲೇ ಪ್ರದರ್ಶನ ನೀಡಿದ್ದರು.

ಅರುವ ಮೇಳದ ಎರಡನೇ ತಿರುಗಾಟದಲ್ಲಿ, ಪ್ರಾರಂಭದಲ್ಲಿ ಇದ್ದ ಹಲವಾರು ಕಲಾವಿದರು ಬೇರೆ ಬೇರೆ ಮೇಳಗಳಿಗೆ ಸೇರ್ಪಡೆಯಾದರು. ಎರಡನೇ ತಿರುಗಾಟದಲ್ಲಿ ಕಾಂಚನ ಸಂಜೀವ ರೈ, ಅರುವ ನಾರಾಯಣ ಶೆಟ್ಟಿ, ಅರಸಿನಮಕ್ಕಿ ಶ್ರೀನಿವಾಸ ಗೌಡ, ಉಮೇಶ್ ಹೆಬ್ಬಾರ್ ಮುಂತಾದ ಕಲಾವಿದರಿದ್ದರು. ಎರಡನೇ ತಿರುಗಾಟದಲ್ಲಿ "ಮುಳ್ಳಿದ ಮಲ್ಲಿಗೆ" ಪ್ರದರ್ಶನಗೊಂಡಿತು. ಈ ಪ್ರಸಂಗವೂ ಜಯಭೇರಿ ಬಾರಿಸಿತು.

"ಪರಕೆದ ಪಿಂಗಾರ" ಯಶಸ್ಸಿನಿಂದ ಉತ್ತೇಜನಗೊಂಡ ಅರುವ ನಾರಾಯಣ ಶೆಟ್ಟರು ನಂತರದ ತಿರುಗಾಟಗಳಲ್ಲಿ ಅದೇ ಹೆಸರನ್ನು ಹೋಲುವ "ಪರಕೆದ ಗಗ್ಗರ" "ಪರಕೆದ ಪದ್ದೆಯಿ" ಮುಂತಾದ ಪ್ರಸಂಗಗಳನ್ನು ರಂಗಕ್ಕೆ ತಂದರು. ಅರುವ ಮೇಳದಲ್ಲಿ ಸುಪ್ರಸಿದ್ಧ ಕಲಾವಿದರಾದ ಕರುವೊಳು ದೇರಣ್ಣ ಶೆಟ್ಟಿ, ಉರ್ವ ಅಂಬು, ಬೆಟ್ಟಂಪಾಡಿ ಬಾಳಪ್ಪ ಶೆಟ್ಟಿ, ಕೊಳ್ಯೂರು ಗೋಪಾಲಕೃಷ್ಣ ಭಟ್, ನೇರಳಕಟ್ಟೆ ಶಂಕರ ಪೈ, ದೇವದಾಸ್ ಈಶ್ವರಮಂಗಲ ಮುಂತಾದ ಕಲಾವಿದರೂ ಸೇವೆ ಸಲ್ಲಿಸಿದ್ದಾರೆ. ನಂತರದ ತಿರುಗಾಟಗಳಲ್ಲಿ ಮೇಳವು ಸ್ವಲ್ಪ ಮಟ್ಟಿಗೆ ಹಿನ್ನಡೆ ಕಂಡಿತು ಎನ್ನಬಹುದು. ಎಂಟು ವರ್ಷಗಳ ತಿರುಗಾಟದ ನಂತರ ಅರುವ ಮೇಳವು ತನ್ನ ತಿರುಗಾಟ ನಿಲ್ಲಿಸಿ ನೇಪಥ್ಯಕ್ಕೆ ಸರಿಯಿತು.

ತನ್ನ ಅಲ್ಪ ಕಾಲದ ತಿರುಗಾಟದಲ್ಲಿ ಅರುವ ಮೇಳವು ತುಳು ಪ್ರಸಂಗಗಳ ಪ್ರದರ್ಶನಕ್ಕೆ ದೊಡ್ಡ ಕಾಣಿಕೆ ನೀಡಿದೆ ಎಂಬುದನ್ನು ಮರೆಯುವಂತೆಯೇ ಇಲ್ಲ ಎನ್ನಬಹುದು . ಅರುವದಂತಹ ಗ್ರಾಮೀಣ ಪ್ರದೇಶದಲ್ಲಿ ಯಕ್ಷಗಾನ ಮೇಳವನ್ನು ಹೊರಡಿಸಿದ್ದುದು ಅರುವ ನಾರಾಯಣ ಶೆಟ್ಟರ ಒಂದು ದೊಡ್ಡ ಸಾಧನೆಯೇ ಹೌದು.



**ಎಂ.ಶಾಂತರಾಮ ಕುಡ್ವ**



